ಯಕ್ಷಗಾನ

ರತ್ನಾವತಿ ಕಲ್ಯಾಣ

ನಂದಳಿಕೆ ಲಕ್ಷ್ಮೀನಾರಾಯಣ [ಮುದ್ದಣ] ವಿರಚಿತ

1976

ಸುಬೋಧ ಸಾಹಿತ್ಯ ಭಂಡಾರ
ಹಿರಿಯಡಕ, ದ. ಕ.

ಬೆಲೆ : ರೂ. 1-00

D. S. Achar 7-8-79

ಶ್ರೀರಸ್ತು

ಯಕ್ಷಗಾನ

ರತ್ನಾವತೀ ಕಲ್ಯಾಣ

॥ ಶಾರ್ದೂಲ ವಿಕ್ರೀಡಿತ ವೃತ್ತ ॥

ಶ್ರೀ ಲಕ್ಷ್ಮೀ ವರಮಬ್ಜ ಜಾತ ಪಿತರಂ · ಬಾಲಾರ್ಕ ಕೋಟಿಪ್ರಭಂ ।
ನೀಲೇಂದೀವರಶಾಮ ಕೋಮಲ ವಪುಃ । ಸಾಲಂಕೃತೋರಸ್ಥಲಂ ॥
ಫಾಲಾಕ್ಷಾರ್ಚಿತ ವ್ಯಾಳರಾಜ ಶಯನಂ । ಕಾಳಿಂಗ ಸಮ್ಮರ್ದನಂ ।
ಮೂಲುಲಂ ಸುರಪಾಲ ಮುಖ್ಯನುತ ಗೋ । ಪಾಲಂ ಸದಾ ಭಾವಯೇ ॥ ೧ ॥

ರಾಗ · ಭೈರವಿ–ಝಂಪೆ

ಚಾರು ಸಂಭ್ರಮದಿ ವಿ । ಸ್ತಾರವಾಗಿರುವ ವಂಗ । ಧಾರಿಣಿಯು ವೈಭವದಿ ಮೀರಿಮುಸು ಸ್ವರವ ॥ ೧ ॥ ಬಿಡಗಿಸಿಂ ರಂಜಿಸುವ ಪ್ರೊಡವಿಯನು ಪ್ರೇಮ ದೊಳು । ವೃಷವರ್ಮನೆಂದೆನುವ ಕಡು ಪರಾಕ್ರಮಿಯು ॥ ೨ ॥

ಸತ್ಯ ಸದ್ಗುಣದಿಂದ । ಪೃಥ್ವಿಯನು ದಯದಿ ಪೊರೆ। ಯುತ್ತಿರ್ದ ಮಂತ್ರಿ ಜನ ಮೊತ್ತದಿಂ ಜನಪ ॥

ವಾರ್ಧಕ

ಇಂತು ಕೆಲಗಾಲ ಶ್ರೀಕಾಂತನ ಕಟಾಕ್ಷದೊಳು । ಸಂತೋಷದಿಂ ಭೂಕಾಂತೆಯರ ಪಾಲಿಸಿರ । ಲಂತರಂಗದಿ ಪುತ್ರಸಂತತಿಗಳಿಲ್ಲೆಂಬ ಸಂತಾಪದಿಂದ ತನ್ನ ॥ ಮಂತ್ರಿಯೊಡನುಸುರಿ ಬಲು । ಚಿಂತೆಯೊಳಗಿರುತಿರಲ್ । ಕಂತು ಪಿತನಂ ಮನದಿ ಚಿಂತಿಸುತ ನಾರದ ಮ । ಹಾಂತ ಮುನಿ ನಡೆತಂದ । ನಿಂತೆನಲು ಸುರಿದಂ ತಾಂ ತಡೆಯದೋರ್ವ ಚರನು ॥ ೧ ॥

ರಾಗ-ಕೇತಾರಗೌಳ-ಅಷ್ಟತಾಳ

ದ್ವಾರಪಾಲಕನೆಂದ ವಾರತೆಯನು ಕೇಳಿ । ಭೂರಿ ಸಂತೋಷದಿಂದ ||
ನಾರದ ಮುನಿಯನ್ನು ! ಭೋರನೆ ಕರೆತಂದು । ಏರಿಸಿ ಪೀಠವನು || ೧ ||
ವಂದನೆಗೈಯುತ್ತ ನಿಂದಿರೆ ಭೂಪನ । ಕಂದಿದಾನನವ ನೋಡಿ || ಬಂದಿಹ
ಬವಣೆಯೇನೆನುತಚ್ಚರಿಯಿಂದ ತಾ ಬೆಸಗೊಂಡನು || ೨ ||

ರಾಗ-ಸೌರಾಷ್ಟ್ರ-ಏಕ

ಧಾರಿಣಿ ಪಾಲಕನೇ ನಿನ್ನ । ಚಾರುವದನ ಬಾಡಿದಂತೆ । ತೋರುತಿಹುದು
ಎನಗಿನ್ನದರ । ಕಾರಣ ಪೇಳೈ || ೧ || ಆದಡೇ ಪೇಳ್ವೆ ಲಾಲಿಪುದು । ಮೇದಿನಿ
ಯೊಳು ಪುತ್ರರಿಲ್ಲ । ದಾದೆ ನರಕ ಪಾತ್ರನೆಂಬ । ಖೇದವೊದಗಿದೆ || ೨ || ಭೂ
ವರೇಣ್ಯ ಲಾಲಿಸೈ ನೀ । ನೀ ವಿಧದಿ ದುಃಖಿಸುವುದೇಕೆ । ಭಾವಜಾರಿ ಕರುಣ
ದಿಂದಲೀವ ಮಕ್ಕಳ || ೩ || ಪಿಡಿ ಈ ಚೂತ ಫಲವ ನಿನ್ನ । ಮಡದಿ ರನ್ನೆ
ಸವಿಯಲವಳು । ಪಡೆವಳೋರ್ವ ಸುತೆಯನೆಂದು । ನಡೆದ ಮುನಿರಾಯ || ೪ ||

ಭಾಮಿನಿ

ಮುನಿಪತಿಯು ತಾ ತೆರಳಲಿತ್ತಲು । ಮನದಿ ಹರುಷವನಾಂತು ಭೂಪನು
ವನಿತೆ ಸೌರಂಭೆಯನು ಕರೆದಿಂತೆಂದನವಳೊಡನೆ || ವನಜಮುಖಿ ಕೇಳ್
ನಾರದಾಹ್ವಯ ಕರುಣಿಸಿದ ಫಲ । ತಿನಲು ಪುತ್ರಿಯ ನೀ ಪಡೆವೆಯೆಂದಿತ್ತ
ನಾಕ್ಷಣದಿ || ೧ ||

ಕಂದ ಪದ್ಯ

ಅನಿತರೊಳಾ ಕಾಮಿನಿ ತಾ । ಮನದೊಳಕ್ಕಜಗೊಳುತತಿ ತವಕದೊ
ಳಾಗಂ || ಜನಪಾಲಕನಿತ್ತಿಹ ಫಲ । ವನು ಭುಂಜಿಸಿದಳು ಪುರಹರನನು ನೆನೆ
ಯುತ್ತಂ || ೧ ||

ರಾಗ-ಸಾಂಗತ್ಯ-ರೂಪಕ

ಇಂತು ಕಾಮಿನಿಯು ಭೂಕಾಂತನಿತ್ತಿಹ ಫಲ । ತಾನು ಭುಂಜಿಸೆ ಬಳಿಕ ||
ಅಂತಳು ಗರ್ಭವ । ನಂತರ ಸದ್ಗುಣ । ವಂತ ನೃಪಾಲ ತಾ ತಿಳಿದು || ೧ ||

ವರ ಪುರೋಹಿತರನ್ನು ಕರೆಸಿ ಶೀಮಂತವ । ನೆರವೇರಿಸಿದ ಭೂಪ ಬಳಿಕ ॥ ತರುಣಿ ಸೌರಂಭೆಗೆ ಹರಿದುದು ನವಮಾಸ | ಪುರಜನರ್ಸಹಿತ ತೋಷದಲಿ ॥೨॥ ಇರುತಿರಲಿತ್ತ ಭೂ । ವರನರ್ಧಾಂಗಿಯು ಬಲು । ತರ ವೇದನೆಯೊಳು ತಾ ಬಳಲಿ ॥ ಇರದೋರ್ವ ಗೆಳತಿಯೊ । ಕೊಡೆದಳು ಮನಸಿನ । ಸರಿಯನಿಂತೆಂದು ವಿಸ್ತರಿಸೀ || ೩ ||

ರಾಗ-ನೀಲಾಂಬರಿ-ತ್ರಿವುಡೆ

ಕೇಳಮ್ಮ ತನುವಿನೊಳು । ಇರುವ ಕಷ್ಟ । ತಾಳಲಿನ್ನೆಂತು ಪೇಳು ॥ ಜಾಲವಲ್ಲದು ಕ್ಷಣಗಾಲ ತಡೆಯಲಾರೆ । ಪೇಳಿ ಕಳುಹು ಭೂಪಗೆ । ನಮಿಪೆ ಹೀಗೆ || ೧ ॥ ಜಾನು ಕಟಿಗಳು ಕಾಣೆ । ನೋಯುತಲಿವೆ | ಏನ ಮಾಡಲಿ ನಾ ಜಾಣೆ ॥ ಮಾನಿನಿಮಣಿ ಬ್ರಹ್ಮ ತಾನೆ ಗೈದಿಹ ಕೃತ್ಯ । ಕ್ಕಾನುವರಾರು ಸಖಿ । ವನಜಮುಖಿ ॥ ೨ || ರಸನೇಂದ್ರಿಯವು ಕೆಟ್ಟದೆ । ಒಡಲಿನೊಳು । ಹಸು ತೃಷೆಗಳು ಕಟ್ಟದೆ । ಕುಸುಮಾಕ್ಷಿ ಪೇಳಲೇನುಸುರು ಸಿಕ್ಕಿದಂತಿದೆ । ಉಸುರು ಯೇನೆನುತ ನೀರೆ । ಸಹಿಸಲಾರೆ ॥ ೩ ||

ಭಾಮಿನಿ

ಅರಸ ಕೇಳ್ ಬಳಿಕಿತ್ತ ಭೂಮಿಪ । ನರಸಿ ಮರುದಿನ ಶುಭಮುಹೂರ್ತದಿ ವರ ಸುಪುತ್ರಿಯ ಪಡೆದಳಾ ಮುರಹರನ ಕರುಣದೊಳು । ಪರಮ ಹರುಷದಿ ಜನಪ ಮಂತ್ರಿಯ ಕರೆದು ಪೇಳಿದ ಪಟ್ಟಣವ ಶೃಂಗರಿಸುದೆನೆ ಕೇಳುತ್ತ ಮನದಿ ಮುದವಾಂತು || ೧ ॥

ರಾಗ- ಸೌರಾಷ್ಟ್ರ-ತ್ರಿವುಡೆ

ಪುರವರವ ಶೃಂಗರಿಸಿ ಮಂತ್ರೀ । ಶ್ವರನು ವಿಪ್ರಸ್ತೋಮವನು ತಾ ಕರೆಸಿ ಕೊಡಿಸಿದ ಧನ ಕನಕವನು । ಹರುಷದಿಂದ || ೧ ॥ ಇತ್ತಲಾ ಶಿಶುವಿಂಗೆ ದಿನಗಳು । ಹತ್ತು ಸಂದವು ಮರುದಿವಸ ಭೂ । ಪೋತ್ತಮನು ಪುಣ್ಯಾಹ ವಾಚನೆ ಬಿತ್ತರಿಸಿದ || ೨ || ಪುಟ್ಟಿರುವ ಕುವರಿಂಗೆ ತಾ ಪೆಸ । ರಿಟ್ಟ ರತ್ನಾವತಿಯೆನುತ ನೃಪ । ಕಟ್ಟಳೆಯನನುಸರಿಸಿ ದ್ವಿಜರುಗಳಿಷ್ಟದಿಂದ ॥ ೩ ||

ರಾಗ--ಸುರುಟಿ- ಏಕ

ದಿನ ದಿನಕಾ ಕುವರಿ । ಬೆಳೆದಳು । ಘನಲೀಲೆಯದೋರಿ ॥ ಮನಸಿಜ
ನಂಗೈಗಿಣಿ ತನ್ನಂಪು ಶರ । ವನು ತಿರುಗಿಸಿ ನಗೆ । ಯನು ಬೀರುತ್ತಾ ॥ ೧ ॥
ಪದುಮಸಖಿನ ತೆರದಿ । ಶೋಭಿಸ । ಪಮಪಾಕ್ಷಿಗೆ ಮುಂದದಿ ॥ ಪದಿನಾರ್ಕ॥
ಯಲು ಮಪಗಜಗಮನೆಯು ! ಮದನನುರಿಗೆ ಬಲು ಬೆದರಿರಲಿತ್ತ ॥ ೩ ॥

ರಾಗ-ಕಾಂಬೋಧಿ ಝಂಪೆತಾಳ

ಅತ್ತಲವನಿಪತನ್ನಾ । ಪುತ್ರಿಯನು ವತ್ಸನಿಂ। ಗಿತ್ತುಲಗ್ನವ ಗೈವ್ರದೆ
ನುತಾ ॥ ಚಿತ್ತದೊಳು ಯೋಚಿಸಿರ । ಲಿತ್ತವರಕಾಳಿಂಗ । ಪೃಥ್ವಿಪಾಲಕ
ಭದ್ರಸೇನಾ ॥ ೧ ॥ ಎಂದೆನುವ ನರಪತಿಯು । ವಂದಿಮಾಗಧಮಂತ್ರಿ।
ಸಂದಣಿಯೊಳೊಂದುದಿನ ವೆಸೆಯೋ ॥ ಬಂದೀರ್ವಚರಭೂಪಗೆಂದ ಹೊರ
ಬಾಗಿಲೊಳು ಬಂದಿಹರುಭೂ । ದಿವಿಜರೆನಲೂ॥೨॥ಒಡನೆ ಕಳುಹಿದ ವಿಪ್ರ।
ಗಡಣವನು ಕರತರಲು । ಪೊತವಿ ಪಾಲಕನು ಬಳಿಕಿತ್ತಾ । ತಡೆಯುನೈತಂದು ಚರ।
ನುಡಿದನೈ ನಿಮ್ಮನೊಳ । ಬಿಡಲು ಪೇಳಿರುವ ದೊರೆಯೆನುತಾ ॥ ೪ ॥

ಕಂದಪದ್ಯ

ಬಂದವಿಪ್ರರು ಭೂಪಗೆ । ಚಂದದೊಳಾಶೀರ್ವದಿಪುತಲಿರಲನಿತರೊಳಂ
ಬಂದಿಹುದೆಲ್ಲಿಂದೆಲ್ಲಿಂದಲಿ ನಿ । ವೆಂದೆನುತಲಿ ಬೆಸಗೊಂಡನು ವಿಸುಮದಿ
ನೃಪತಿಂ ॥ ೧ ॥

ರಾಗ-ಕೇತಾರಗೌಳ ಅಷ್ಟತಾಳ

ಪೊಡವಿಸುರರು ನೀವು । ನಡೆತಂದುದೆಲ್ಲಿಂದ । ನುಡಿಯುಬೇಕವನೆನ್ನೊಳೂ
ಒಡನೆಯಾತ್ರಿ,ಕರಂತೆ । ಪೊರನುಟ್ಟಿರೆಲ್ಲಿಗೆ। ಬಿಡದೆ ಸೂಚಿಸುವನೈಸೇ ॥ ೧ ॥
ಲಾಲಿಸೈ ಧಾರುಣಿ । ಪಾಲಕ ಪೇಳ್ವುದ । ಶೀಲಗುಣಾನ್ವಿತನೇ ॥ ಭೋಲ
ನೆಯು ಸುತ್ತಿ । ಮೇಲೆನಡೆದು ಜಪ್ನು। ಬಾಲೆಯೊಳ್ ಸ್ನಾನಗೈದೂ ॥ ೨ ॥
ಇಚಿಬಂದೆವು ಮುಂದೆ । ವೆರೆಸಂಗದೇಶವ । ದೊರೆ ಧೃಡನರ್ಮನಲ್ಲಿ ॥
ಪೊರವಿವಲ್ಲಿಂದ ನೀ । ಕರುಣಿಸೇನಾದರು । ತೆರಳಿಪೋ ಗುವೆವು ನಾವೂ ॥ ೩ ॥

ರಾಗ–ಆರ್ಯ–ಸವ್ವಾಯಿ

ನುಡಿಯನು ಕೇಳುತ । ಪೊಡವಿಪ ಮನದೊಳು। ಕಡು ಹರುಷದೊಳಿರೆ ಮನ್ನಿಸುತಾ ॥ ಕೊಡಿಸುತ ಬೇಕಾದೊಡವೆಯ ವಿಪ್ರರ । ನುಡಿದನು ಮಣಿ ಯುತ್ತ್ರಿಗೆನುತಾ ॥ ೧ ॥ ಅನುದಿನ ತಮವನು । ತೃಣಸಮಕೆಣಿಸುತ । ಜನ ಪದಗಳನೆಲ್ಲವ ತಿರುಗೀ ॥ ದಣಿದಿರುವಿರಿ ನಾಲ್ ! ದಿನವಿಲ್ಲಿರುತಲಿ ತನು ಶ್ರಮ ವಳಿದಾ ಮೇಲ್ ಪೋಗಿ ॥ ೨ ॥

ಇದು ಹೊರತು ಮನ್ನನವು ನೀವ್ ತಿರು । ಗಿದ ನಗರ ವೈಚಿತ್ರ್ಯವನು ತಿಳಿ । ವುದಕೆ ಕೋರುವುದದನು ದಯೆ ಪಾಲಿಸುವುದೆನೆ ಕೇಳ್ದಾ ॥ ಆದರೊ ಳೋರುವ ವಿಪ್ರ ತಾನತಿ । ಮುದದೊಳುಸುರಿದ ಭೂಪ ಕೇಳೈ । ಬುಧರು ನಾವ್ ನಮಗೇನು ತಿಳಿವುದು ಪೊಸತು ವಾರ್ತೆಗಳೂ ॥ ೧ ॥

ಆದಡೆ ಲಾಲಿಸು ಭೂಮಿಪ । ಮೇದಿನಿಪತಿ ದೃಢವರ್ಮಾಖ್ಯನ ಸುತೆ ಯೋರ್ವಳ್ ॥ ಈ ಧರೆಯೊಳಗನುಪಮತರ । ವಾದತಿ ಸೊಬಗಿನೊಳಿರುವಳು ಗಜಗಮನೆಯು ತಾ ॥ ೧ ॥

॥ ರಾಗ-ಘಂಟಾರವ-ಏಕತಾಳ

ಚಿತ್ತವಿಸು ಭೂ। ಪೋತ್ತಮನೆ ನುಡಿಯಾ । ದೃಢವರ್ಮರಾಯನ । ಪುತ್ರಿಯಳ ಸುಚರಿತ್ರೆಯನು ಜೀಯಾ ॥ ಇತ್ತ ಭೂಮಿಪ ಪುತ್ರರಿಲ್ಲದೆ । ಚಿತ್ತ ಚಂಚಲಿಸುತ್ತಲಿರೆ ಕೇಳ್ । ಮತ್ತೆ ನಾರದ ಋತ್ವಿಜೋತ್ತಮ । ನಿತ್ತ ಫಲ ವನು ಪೃಥ್ವಿಪಾಲಗೆ ॥ ೧ ॥ ಫಲವ ಭೂಮಿಪಲಲನೆಮಣಿಗೀಯೇ । ವಿವರಿ ಸುವ ಕಥನದ । ನಲವಿನಿಂದಲಿ ಲಾಲಿಸೈ ದೊರೆಯೇ ॥ ಜಲಜಮುಖಿತಾ । ಮೆಲಲು ಫಲವನು । ಬಳಿಕ ಪಡೆದಳೀ ಸುಲಲಿತಾಂಗಿಯ । ನಳಿನನೇತ್ರೆಯ ಬೆಳೆದಿಹಳು ಬಹು ! ಚಲುವ ಭೂಮಿಪನಿಳಯದಲ್ಲಿಯೆ ॥ ೨ ॥ ಎಂತು ವರ್ಣಿಪೆ ಕಾಂತೆಯನು ರಾಯಾ । ಭೂಮಿಪನ ಸುತೆ ಗುಣ । ವಂತೆ ರಾಜಿ ಸುವಂತ ಪರಿ ಜೀಯಾ ॥ ದಂತಿಗಾಮಿನಿ ಕಂತುಶರದುರಿ । ಯಂತರಿಸದತಿ ಚಿಂತೆಯೊಳಗಿರ । ಲಿಂತಿದನು ನೃಪ ತಾಂ ತಿಳಿದು ಭೂ । ಕಾಂತವತ್ಸಗೆ ಗೊಂತುಮಾಡಿಹ ॥ ೩ ॥

ಭಾಮಿನಿ

ತರುಣಿಯನು ವತ್ಸಾಖ್ಯನಾಗಿಹ । ನರಪತಿಗೆ ತಾನಿತ್ತು ಮದುವೆಯ । ವಿರಚಿಸಲು ಬೇಕೆನುತ ದೃಢವರ್ಮಕನ ಮನದಿಚ್ಛೆ ॥ ಅರಿತಿಹೆವು ನಾವಿಷ್ಟೆಯೆನುತಲಿ । ತೆರಳಿ ಪೋಗಲು ಭದ್ರಸೇನನು । ಹರುಷದಿಂದಲಿ ನುಡಿದ ತನ್ನಯ ಮಂತ್ರಿವರ್ಯನೊಳೂ ॥ ೧ ॥

ರಾಗ ದೇಶಿ ಅಷ್ಟತಾಳ

ಕೇಳಯ್ಯಾ । ಮಂತ್ರಿ । ಕೇಳಯ್ಯಾ ॥ ಪಲ್ಲ ॥ ಕೇಳಯ್ಯಾ ಮಂತ್ರಿ ನಾ ಪೇಳುವ ನುಡಿಯಾ । ಜಾಲವಲ್ಲಿದುವಿಪ್ರರಾಡಿದ ಪರಿಯಾ ॥ ಕೇಳಯ್ಯಾ ।' । ಅನುಪಲ್ಲ ॥ ಅಂಗದೇಶದ ನೃಪ ದೃಢವರ್ಮನೆನುತಾ । ತುಂಗವಿಕ್ರಮ ನಿಹನವನಿಂಗೆ ಮತ್ತಾ ॥ ಅಂಗಜನರಗಿಣಿಯೆನಿಲು ಸೊಬಗಿನೊಳೂ ॥ ಭೃಂಗಕುಂತಳೆ ಪುಟ್ಟಿರುವಳಂತೆ ಕೇಳೂ ॥ ೧ ॥ ಚಂದಿರಮುಖಿಯನ್ನು ವತ್ಸಾಖ್ಯ ನೃಪಗೇ । ಚಂದದೊಳಿತ್ತು ಮದುವೆ ಮಾಳ್ಪೆ ಹೀಗೆ ॥ ಎಂದೆನುತಲಿ ಭೂಪ ಯೋಚನೆಗೈವ ।'ನೆಂದು ವಿಪ್ರರು ಪೇಳಿ ಪೋದರು ನಿಜವಾ ॥ ॥ ೨ ॥ ಅದರಿಂದ ನೀನು ಚಾರಕರನ್ನು ಕರೆದು । ಪದುಮನೇತ್ರೆಯ ನಾನಿಚ್ಛಿಪೆನೆಂದು ಬರೆದೂ ॥ ವಡಗಿನೊಳಮಿತ ವಿಚಿತ್ರ ವಸ್ತುಗಳಾ । ಮುದದೊಳೀವುತ ಕಳುಹಿಸು ಕಂಚುಕಿಗಳಾ ॥೩ ॥ ಅಪ್ಪಣೆಯನು ಕೇಳಿ ಮಂತ್ರಿಯು ತಿಳಿದೂ । ಒಪ್ಪುವ ಪತ್ರಿಕೆಯನು ತಾನೆ ಬರೆದೂ ।। ತಪ್ಪದೆ ದೃಢವರ್ಮನಲ್ಲಿಗೆ ಪೋಗೀ । ಒಪ್ಪಿಸಿ ಬರುವುದೆಂದೆನೆ ಶಿರಬಾಗೀ ॥ ೪ ॥

ಕಂದಪದ್ಯ

ಪೊರಟಾಕ್ಷಣ ಕಂಚುಕಿಗಳ್ । ವರದೃಢವರ್ಮಾಖ್ಯನ ಪಟ್ಟಣಕತಿ ಜವದಿಂ ॥ ಬರಲಾ ಭೂಪನ ಮನ್ನಿಸು । ತಿರದುಸುರಿದನವರೊಳು ಬಂದಿಹುದೇನೆನುತಂ ॥ ೧ ॥

ರಾಗ-ತೋಡಿ-ರೂಪಕ

ಆರು ನೀವೆಲ್ಲಿಂದ ಬಂದಿರೀ ವಸ್ತುಗ । ಳ್ಯಾರು ಕೊಟ್ಟಿರುವರೆಂದೆ

ನಲೂ || ಚಾರಕರೆಂದರ್ನಮ್ಮಯ ದೊರೆ ಕಳುಹಿದ । ಚಾರುಲೇಖನ ಸಹಿ ತಿಂದೂ || ೧ || ಯೆನುತಾ ಪತ್ರಿಕೆಯನ್ನು ಕೊಡಲಾ ಭೂಪನು ಮಂತ್ರಿ ಯನು ಕರೆದೆಂದ ವಾಚಿಪಡೇ || ಅನಿತರೊಳ್ ಮಂತ್ರಿಯೂ | ತೆರೆದೂ ಪತ್ರಿಕೆಯನ್ನು | ಇನಿತೆಂದು ವಾಚಿಸಿ ಪೇಳ್ದ || ೨ ||

ರಾಗ-ಕಾಂಬೋಧಿ-ಝಂಪೆತಾಳ

ಮಿತ್ರಾಂಬುಜಾವಳಿಗೆ ಮಿತ್ರನಂತೆಸೆವಂಗ । ಧಾತ್ರಿಪತಿ ವೃಥವರ್ಮ ನೃಪಗೇ || ಉತ್ತಮಕಳಿಂಗ ಧಾರಿತ್ರಿಗೊಡೆಯನು ತಾನು । ಮಿತ್ರಭಾವದಿ ಬರೆದ ಲಿಖಿತಾ || ೧ || ಇದುವರೆಗೆ ನಾವು ಶ್ರೀ ಪದುಮನಾಭನ ದಯದಿ । ಪದುಳಿಗರು ಭೂಮಿಪತಿ ನಿನ್ನಾ || ಸುದತಿ ಪರಿವಾರದಭ್ಯುದಯವನು ಸೂಚಿಸುತ । ಮುದದೊಳಿತ್ತಪುದುತ್ತರವನೂ || ೨ || ಭೂಮಿಪತಿ ಕೇಳ್ ನಿನ್ನ ಕಾಮಿನಿಯು ಪೆತ್ತ ಗಜ। ಗಾಮಿನಿಯ ಬೆಡಗ ನಾ ತಿಳಿದೂ || ಕಾಮಿಸಿಹೆ ನದರಿಂದ ಸೋಮ ಪ್ರಭೆಯನ್ನು ಕೊಟ್ಟು । ಪ್ರೇಮದಿಂ ವೈವಾಹವೆಸಗೂ || || ೩ || ಈ ತೆರದಿ ಬರೆದ ಲಿಖಿತಾರ್ಥವನು ತಿಳಿದು ಭೂ । ನಾಥ ನುಡಿದನು ಸಚಿವನೊಡನೆ || ಮಾತುಕೊಟ್ಟಹೆನು ಸುಪ್ರೀತ ವತ್ಸಾಖ್ಯನಿಂ । ಗೀ ತರುಣಿ ಯನು ಕೊಡುವೆನೆನುತಾ || ೪ || ಅದರಿಂದಲೀನೃಪನು ಬದಲು ಕುವರಿಯ ನೋಡಿ । ಮದುವೆಯಾಗುವುದು ಬಲು ಲೇಸೂ || ಇದಕಾಗಿ ನೃಪತಿ ದುರ್ಮುಖದತೋದಂತೆ ಬರೆ । ವುದು ಭದ್ರಸೇನನಿಗೆ ತಿರುಗೀ || ೫ || ಬರೆದು ಕಳುಹಿಸುವುದೆನಲರಿತು ಮಂತ್ರಿಯು ಬಂದ । ಚರರೊಡನೆ ಕೊಟ್ಟು ಕಳುಹಿ ಸಲೂ । ತೆರಳಿ ಬಂದಾದೂತರರಸಗಭಿನಮಿಸಿ ತಂ । ದಿರುವ ಲೇಖನವಿತ್ತ ರಾಗಾ || ೬ ||

ರಾಗ-ಕೇತಾರಗೌಳ-ಝಂಪೆತಾಳ

ಧಾರುಣಿಪನೋದಿ ಲಿಖಿತಾ । ಮನದೊಳಗೆ | ಘೋರಿರೋಷನತಾ ಳುತಾ || ವೀರ ಮಂತ್ರಿಯ ಕರೆಯುತಾ । ವುಸುರಿದನು । ಪೇಳ್ ಕಳು ಹಿರ್ಪ ಪರಿಯಾ || ಬಾಲೆಯನು ಕೊಡೆನೆನುತಲೀ । ನಮ್ಮ ಹೀ । ಯಾಳಿಸಿಹ ಗರ್ವದಲ್ಲೀ ೨ || ಪೊಡವಿಪನು ವತ್ಸನಹುದೂ | ಗೋವಳರ ಹುಡುಗ

ರಾವ್ ಹೀಗೆನುವದೂ || ಫಡ ನೃಪನೊಳಿರಲಿಕಿಂತೂ । ನಾವಿನ್ನು । ಹುಡುಗಿಯನು ಬಿಡುವದೆಂತೂ || ೩ || ಬದಲು ಕುವರಿಯ ನೋಡುತಾ | ಲಗ್ನಗೈವುದು ಎಂದು ಬರೆದ ಮತ್ತಾ || ಉದಧಿಜಲಕಾರಸ್ಪಣೇ | ಭೂಪ ತಾ | ನಿದವರದಿಹನು ಸುಮ್ಮನೇ || ೪ || ಗೊಡವೆ ಬಿಡಬೇಕೆನುವರೇ | ಆರಾದ | ರೊಡೆತನವನಿತ್ತಿರುವರೇ || ಬಡಿವಾರ ನಿಲಿಸಿ ಬಿಡುವೇ | ಅರಸನಿಗೆ । ಕಡೆಗಾಲ ತೋರಿ ಕೊಡುವೇ || ೫ || ಕರಿಸು ಮಾರ್ಬಲವನೀಗಾ | ನಾ ಪೋಗಿ। ತರುವೆ ಕುವರಿಯನುಬೇಗಾ || ಪುರವ ಮುತ್ತುತ ಭೂಪನಾ । ಗರ್ವವನು | ತರಿದು ಬರುವೆನು ಈಕ್ಷಣಾ || ೬ ||

ಭಾಮಿನಿ

ಎಂದೆನುತ ಭೂಮಿಪನು ಪೊರಮಡು । ವಂಪವನು ಕಾಣುತ್ತ ಸಚಿವನ ' ಕಂದ ಚಿತ್ರಧ್ವಜನು ತಿಳಿದಾ ನೃಪನ ಸುಮ್ಮುಖಕೇ || ಬಂದು ಬಿನ್ನವಿಸಿದನು ಭೂಪಗೆ । ತಂದೆ ಕೇಳ್ ನೀವೇಕೆ ಪೊರಟಿರಿ | ಪಂದಭೂಪನ ಗೆಲುವಡೆನುತಿಂತೆಂದನವನೊಡನೇ || ೧ ||

ರಾಗ–ಮಾರವಿ–ಏಕತಾಳ

ನುಡಿಯನು ಲಾಲಿಸು ಪೊಡವಿಪ ನೀ ಪೊರ । ಮಡುವದಿದೇನ್ ಘನವೂ || ಬಡಕುರಿಯನು ಗೆಲುವಡೆ ಕೇಳ್ ಮೃಗಗಳ । ಒಡೆಯನು ತೆರಳುವದೇ || ೧ || ಅಪ್ಪಣೆಯಿತ್ತರೆ ಕ್ಷಿಪ್ರದಿ ಭೂಪನ । ನಪ್ಪಳಿಸುತ ಬಳಿಕಾ || ತಪ್ಪದೆ ಹಿಡಿದೆಳತಪ್ಪೆನು ನಿಮಿಷದಿ । ಬೊಪ್ಪನೆ ಇದು ದಿಟವೂ || ೨ || ಕುನ್ನಿ ನೃಪಾಲನ ಗಣ್ಯ ಕೆ ತರುವೆನೆ । ಮಣ್ಣಿಗೆ ಕೂಡಿಸುತಾ || ಕನ್ಯೆಯ ತರುವೆನು ಸಣ್ಣವನೆನುತಲಿ | ಖಿನ್ನತ್ವವನು ಬಿಡೂ || ೩ ||

ಭಾಮಿನಿ

ಕೇಳುತಲಿ ಮುದವಾಂತು ಭೂಪನು । ವೀಳಿಯವ ತಾನಿತ್ತು ಕಳುಹಲು । ಮೇಲೆ ಚಿತ್ರಧ್ವಜನು ಪೊರಟಾತಾಯಿಗಭಿನಮಿಸೀ । ಪೇಳಿದನು

ಕೇಳ್ ಜನನಿಯಂಗ ನೃ । ಪಾಲನಲ್ಲಿಗೆ ಕಲಹಕ್ಕೈದುವೆ । ಲೀಲೆಯಿಂದಾತೀ ರ್ವದಿಪುದೆನಗೆಂದವಳೊಡನೇ ||

ರಾಗ-ನೀಲಾಂಬ್ರಿ-ಏಕತಾಳ

(ಧಾಟಿ:- ತಪ್ತತೈಲದಿ ದೂಡುವರೆಲೆ ಇವನಾ)

ಅರಿಕೆ ನಿನ್ನಯ ಮನವಾ । ಸುಮ್ಮನೆ ಭೂಮಿ । ಪರೊಳು ಕಾಳಗವೆ ಗೈವಾ ।। ಪರಿಯ ತಿಳಿಯದೆ ವ್ಯರ್ಥಾ । ಪೋಗುವೆನೆಂದು । ತೆರಳುವ ದೇನು ಸ್ವಾರ್ಥಾ || ೧ || ಕರಿಸಂಕುಲವ ಗೆಲುವೇ । ನೆನ್ನುತ ಪೋಪ । ಮರಿಸಿಂಹದೋಲ್ ಮಗುವೇ ॥ ಧುರಧೀರರೊಡನೆ ನೀನೂ । ಕಾದುವೆ ನೆಂಬು । ದರಿತಾಗಿ ತೋರ್ಪುದಿನ್ನೂ ॥ ೨ ||

ಭಾಮಿನಿ

ತನಯ ಕೇಳದರಿಂದ ಕದನಕೆ । ಮನವಮಾಡದೆ ಕ್ಷೀರಕದಳಿಗ । ಳನು ನಿರಂತರ ಸವಿವುತಲೆ ಮನೆಯೊಳಗೆ ಇರುತಿಹುದೂ ॥ ಎನುತ ಮಗು ಡದೊಳಪ್ಪಿ ಮುದ್ದಿಪ । ಜನನಿಯನು ಕಾಣುತ್ತ ನುಡಿವನು । ಸನುಮತವೆ ನೀ ತಾಯೆ ಎನ್ನನು ತಡೆವುದೆಂದೆನುತಾ !! ೧ ||

ರಾಗ-ನವರೋಜು ಏಕತಾಳ

ಅಮ್ಮಯ್ಯಾ ಬಿಡು ದುಗುಡಾ । ನೀ । ಸುಮ್ಮಗೆ ಯೋಚಿಸಬೇಡಾ || ಬೊಮ್ಮಾಮರರನು । ಒಮ್ಮೆಗೆ ಗಣಿಪೆನೆ । ಘಮ್ಮನಾ ಭೂಪನ । ಹಮ್ಮನು ನಿಲಿಸುವೇ ॥ ೧ || ಉಪ್ಪನ್ನಾ ಧರಣಿಪನೂ । ಇ! ತ್ತಿಪ್ಪ ಕಾರಣ ನಾನೂ ।। ಒಪ್ಪದೆ ಪೋದರೆ ತಪ್ಪಲ್ಲವೆ ಮೇಣ್ । ತಪ್ಪುವ ದಾರಿಗೆ ಬಪ್ಪ ಬವಣೆಗಳೂ || ॥ ೨ ॥ ಇದರಿಂದ ಕೇಳವ್ವಾ । ನಾ । ಸಿದಕೋ ಪೋಗುವೆ ಗೆಲುವಾ ॥ ಹದ ನವನೆಲ್ಲವ ಮೊದಲೇ ತಿಳಿದಿಹೆ । ಬದಲೆಣಿಸದೆನೀ ಮುದದೊಳಗಿರುವುದು ॥ ।। ೩ ॥

ರಾಗ-ಸೌರಾಷ್ಟ್ರ-ತ್ರಿವುಡೆ

ಮಾತೆಯೊಡನಿಂತುಸುರುತಲಿ ವಿ। ಖ್ಯಾತ ಚಿತ್ರಧ್ವಜನು ಸಂಗರ। ಕಾತುರದಿ ಪೊರಮಟ್ಟ ತಾ ನಿ। ರ್ಭೀತಿಯಿಂದಾ ॥ ೧ ॥ ಮಂದಿಮಾರ್ಬಲ ತುರಗ ಕರಿಗಳ। ಸಂದಣಿಸುನೆಡಗೊಂಡು ಸಚಿವನ। ನಂದನನು ಕಳಿಕ ಳಿದು ದುರ್ಗವ। ಮುಂದೆ ಬಂತಾ ॥ ೨ ॥ ಧರಣಿಪತಿ ದೃಢವರ್ಮರಾ ಯನ। ಪುರವ ಮುತ್ತುತ್ತಿರಲು ಕಂಡಾ। ಚರರು ಬಳಿಕೋಡುತ್ತ ಪೇಳ್ದರು / ಧೊರೆಯ ಕೂಡೇ ॥ ೩ ॥

ರಾಗ-ಮುಖಾರಿ-ಏಕತಾಳ

ಕೇಳಯ್ಯಾ। ದೃಢವರ್ಮ ಭೂನಾಥಾ। ನಾವೆಂಬ ಮಾತಾ ಜಾಲಾವಲ್ಲಿದು ಲೋಕ ವಿಖ್ಯಾತಾ ॥ ಪೇಳುವದೇನ್ ಭೂ। ಪಾಳರ। ಸೈನ್ಯವು। ಪಾಳೆಯಗೊಟ್ಟಿಹು। ದೇಳ್ಕೆ ಈಕ್ಷಣ ॥ ೧ ॥ ಪುರವಾ ಮುತ್ತುತ ನಮ್ಮನ್ನೆಲ್ಲಾ। ಲಾಲಿಸು ಸುಳ್ಳಲ್ಲಾ। ಚೆರಸೀ ಕಳುಹಿರ್ಪರವರಿನಿತೆಲ್ಲಾ। ದೊರೆಯೊಡನುಸುರುತ। ಕರೆತಹುದೆನುತಲಿ। ಒರೆದೀರ್ಪರು ಭೂ। ವರು ಇದನ್ನೆಲ್ಲಾ ॥ ೨ ॥

ಕಂದಪದ್ಯ

ಚರರೆಂದುದ ಕೇಳುತಲಾ। ಧರಣಿಪ ನಿಜಮಂತ್ರಿಯ ಕರೆದವನೊಡ ನಾಗಂ ॥ ವೊರೆದನು ಕೇಳ್ಕೆ ಸಚಿವನೆ। ಪರನೃಪರೆಮ್ಮಯ ಪುರಕ್ಕೈತಂದಿಹ ರೆನುತಂ ॥ ೧ ॥

ರಾಗ-ಸೌರಾಷ್ಟ್ರ-ಅಷ್ಟತಾಳ

ಲಾಲಿಸು ನಿನ್ನೊಡನೆಂಬುವ ವಚನವಾ ! ಮಂತ್ರಿ ಕೇಳೂ। ಭೂಮಿ। ಪಾಲರು ಗೈದಿರುವನುಚಿತ ಕಾರ್ಯವಾ। ಮಂತ್ರಿ ಕೇಳೂ ॥ ೧ ॥ ಕಳ್ಳರ ತೆರದಲ್ಲಿ ಪುರವ ಮುತ್ತಿಹರಂತೆ। ಮಂತ್ರಿ ಕೇಳೂ। ತಾವು। ಮಲ್ಲಸಾಹಸಿ ಗಳೆಂದೆಂಬ ಹಮ್ಮಿಹುದಂತೆ। ಮಂತ್ರಿ ಕೇಳೂ ॥ ೨ ॥ ವೀರಭುಜಾನ್ವಿತ

ಧರಣೀಶರಾದರೆ । ಮಂತ್ರಿ ಕೇಳೂ ಇಂತು । ಚೋರರ ತೆರದೊಳು ಬರುವ ಪದ್ಧತಿಯುಂಟೆ । ಮಂತ್ರಿ । ೩ ॥ ಕರೆಸೀಗ ನಮ್ಮಂಪು ಭೂರಿಮಾರ್ಬಲವನ್ನು । ಮಂತ್ರಿ ಕೇಳೂ । ಹಯ । ಕರಿಪದಾತಿಗಳ ಸಮೂಹವ ತಡೆಯದೆ । ಮಂತ್ರಿ ಕೇಳೂ ॥ ೪ ॥

ವಾರ್ಧಕ

ಅರಸನಪ್ಪಣೆಯನು ತಿಳಿದಾಗ ಮಂತ್ರಿತಾ । ಕರೆಸಿದಂ ಗಜಸೇನೆ ಮಂಡಿಮಾರ್ಬಲ ಸಹಿತ । ಪುರನ ಮುತ್ತಿಹ ವೀರರಂ ಗೆಲ್ದು ಪಟ್ಟಣದ ಸಿರಿಯ ರಕ್ಷಿಪಡೆ ಬಳಿಕಾ ॥ ಧರಣಿಪಾಲಕನಿತ್ತಲಸ್ತ್ರಶಸ್ತ್ರಾದಿಗಳ । ಕರತಳದಿ ಧರಿಸಿ ಬೆಂಬಲವ ತಾನೊಡಗೊಂಡು । ಬರುತ ಸಂಗರಕೆ ಮುಂದೆಸೆವ ಪರ ಸೈನ್ಯಮಂ ಚದರಿಸಿದ ಕಡುಹಿನಿಂದಾ ॥ ೧ ॥

ಕಂದಪದ್ಯ

ಸೈನ್ಯವು ಚದರುತ್ತಿಹ ಪರಿ ಯನ್ನೀಕ್ಷಿಸಿ ಚಿತ್ರಧ್ವಜ ಬಲು ಧೈರ್ಯದೋಳಂ ॥ ತನ್ನಯ ಮಾರ್ಬಲಕಭಯವ । ಮುನ್ನೀವುತಲಿರಲರಿತಾ ಭೂಪತಿ ನೋಡಿದಂ ॥ ೧ ॥

ರಾಗ-ಭೈರವಿ-ಏಕತಾಳ

ಆರೆಲೊ ಧಡನೃಪ ಕುವರಾ । ಹುಲು । ಚೋರರ ತೆರದೊಳು ಪೋರಾ ॥ ಭೂರಿ ಬಲವ ಸಹಿತಿಂದೂ । ಬಹ । ಕಾರಣವುಸುರೇನೆಂದೂ ॥ ೧ ॥ ತರಳನೆ ನಿನಗಿದು ಹಿತವೇ । ಯಮ । ಪುರಕೈದುವನಮುಯುಕುತವೇ ॥ ತರಳಿವರಿಂದ ನೀ ಪಿಂತೇ । ಮೇಣ್ । ತೆರಳಿಸು ಪತನನು ಮುಂತೇ ॥ ೨ ॥ ದುರುಳಾನೃಪನೆ ಕೇಳಿತ್ತಾ । ನಾನ್ । ತೆರಳಿಬಂದಿಹಪರಿ ಮತ್ತಾ ॥ ತರಳೆ ಯನ್ನಣುಗೆಯನ್ನೊಯ್ದು । ಭೂ । ವರ ಭದ್ರಾಖ್ಯಗಿತ್ತಪುದೂ ॥ ೩ ॥ ಎನುತ ನುಡಿತ್ತಿಹೆವೈ ನಿನ್ನಾ । ಸುತೆ । ಯನು ಕರದೊಯ್ವುತಲಿನ್ನಾ ॥ ಜನಪತಿ ಒಪ್ಪಿಸಿ ಕಡೆಗೇ । ಪಿತ । ನನು ಕಳುಹುವೆನಿನ್ನೆಡೆಗೇ ॥ ೪ ॥ ಭಳಿರೆ ಶಭಾಸು ಮೆಚ್ಚಿದೆನೂ । ದಶ । ಗಳ ರಾವಣ ಸೀತೆಯನೂ ॥ ಕಳವಿನೊಳೊಯ್ದೆದಮ ಪುರಿಗೇ । ತಾ । ತೆರಳಿದುದರಿಯೆಯಾ ಹೀಗೆ ॥ ೫ ॥ ಪರ ಸತಿ ಪರ ಧನ

ಗಳಲೀ । ಮನ । ವಿರಿಸುತ ನರಕಂಗಳಲೀ ‖ ಹೊರಳುತಲಿಹುದೇನ್ ಸ್ವಾರ್ಥ್। ಯೇ । ತರಳನೆ ಕೆಡದಿರುವ್ಯರ್ಥಾ ‖ ೬ ‖ ಧರ್ಮವಿಚಾರವನರಿಯೇ । ದೃಢ। ವರ್ಮ ನಾವ್ ಬಂದಿಹ ಪರಿಯೇ ‖ ಸುಮ್ಮನೆ ಬ್ಯಾಗಳಹದಿರೂ । ನೀ । ನವೊಳಗಿದನುಸುರದಿರೂ ‖ ೭ ‖ ಹುಡುಗನೆ ಕೇಳ್ ಕಡು ಜಡಗೇ ಮ। ದ್ದೊಡನೀಯಲು ನಾಲಿಗೆಗೇ ‖ ಕೊಡುವುದೆರುಚಿಯಿದರಂತೆ । ನಾವ್ । ನುಡಿದುದು ಸೊಗಸುವದೆಂತೇ ‖ ೮ ‖ ಪೊಡವಿಪ ಲಾಲಿಸು ಬರಿದೇ । ಈ ‖ ಬಡಿವಾರದಿ ಫಲವಿಹುದೇ । ಬಿಡುವೆಯ ಕುವರಿಯ ಬೇಗಾ । ನೀ । ತೊಡಗುವೆಯಾ ರಣವೀಗಾ ‖ ೯

ರಾಗ-ಭೈರವಿ-ಅಷ್ಟತಾಳ

ತರಳನೆಂದೆನುತ ಬಿಡೇ । ಗರ್ವವು ನಿನ್ನ । ಶಿರಕಡರಿಹುದು ನೋಡೆ ‖ ಆರೆ ನಿಮಿಷದಿ ನಿನ್ನ । ತರಿಯುತ್ತ ಶೈಮಿನಿ । ಪುರಕೆ ಸೇರಿಸುವೆ ನೋಡೈ ‖ ‖ ೧ ‖ ಧುರಧೀರ ನೃಪನೆನ್ನುತಾ । ಬಲ್ಲೆನು ನಾನು । ತರಳನಾದಡೇನ್ ಮತ್ತಾ ‖ ಸರಳಿನ ಮೊನೆಗಿನ್ನು । ಕೊರತೆ ಹೊಂದಲಿಕುಂಟೆ । ಪರಿಕಿಸಬಹುದೀಗಳೂ ‖ ೨ ‖ ಸಾರಿ ಕೊಲ್ಲಲು ಪಾಪವೂ । ಹೊದ್ದುದು ಎಂಬ ಕಾರಣವಾಗಿ ನಾವೂ ‖ ಈ ರೀತಿಯುಸುರಲು । ಪೋರನೆ ಮದಗರ್ವ । ವೇರಿತದನು ಭಂಗಿಪೇ ‖ ೩ ‖ ಎನುತಗ್ನಿ ಶರವೆಸೆಯೇ । ಚಿತ್ರಧ್ವಜ । ವನಶರದಿಂ ತರಿಯೇ ‖ ಫಣಿಯನು ಗರುಡನಿಂ । ಘನತರ ಗಿರಿಶರ । ವನು ಕುಲಿಶದಿ ಖಂಡಿಸೇ ‖ ೪ ‖ ಪೊಡವಿಪ ರೋಷದಿಂದಾ । ತಿಮಿರ ಶರ । ಬಿಡಲವ ನಿಮಿಷದಿಂದಾ ‖ ಕಡಿಯಲು ದ್ಯುಮಣಿಯಿಂ । ವಡನೆ ಖಡ್ಗವಗೊಂಡು । ಪೊಡೆಯಲು ಕುವರನಿತ್ತಾ ‖ ೫ ‖ ತುಂಡಿಸಲದ ಕಾಣುತ್ತಾ । ಕನಲಿ ಗದೆ । ಗೊಂಡು ಭೂಮಿಪನ ಮತ್ತಾ ‖ ಮಂಡೆಯೊಳೆರಗಲು । ಚಂಡವಿಕ್ರಮನದ । ಖಂಡನೆ ಗೈದನಾಗಾ ‖ ೬ ‖

ಭಾಮಿನಿ

ಈ ತೆರದಿ ಶಸ್ತ್ರಾಸ್ತ್ರಗದೆಗಳು । ರೀತಿಗೆಡೆ ಹುಡುಗನೊಳು ಪೃಥ್ವೀ। ನಾಥನಾಯುಧಹೀನನಾದನು ಕಣನ ಮಧ್ಯದೊಳೂ ‖ ಸೋತುವನು

ತಿಳಿದಾಗ ಚಿತ್ರಸು ॥ ಕೇತ ಭೂಪನ ಕೇರಿವಿಡಿಯೆ ವಿ । ಖ್ಯಾತ ನರಪತಿಂತ ಳಲಿದನು ಬಲು ತರದ ಮುಗುಡದಲೀ ॥ ೧ ॥

ರಾಗ–ನೀಲಾಂಬ್ರಿ--ರೂಪಕ

ಹರ ಹರವೀ ಸಮರದಿ ನಾ । ತರಳನೊಡನೆ ಕಾದಿ ವ್ಯರ್ಥ । ಕೆಲಿಯು ಬಿದ್ದೆಯನ್ನೊಳಿನಿತು । ಕರುಣ ತೋರಿದೆಯಾ ॥ ಕರುಣ ತೋರಿದೆಯಾ ॥ ೧ ॥ ಯಾತಕಾಗಿ ಸುತೆಯನು ಭೂ । ನಾಥ ವತ್ಸಗೀವೆನೆನುತ । ಮಾತು ಕೊಟ್ಟೆ ನಕಟ ಎನಗೆ । ಪ್ರೀತನೆನುತಲೀ ॥ ಪ್ರೀತನೆನುಲೀ ॥ ೨ ॥ ಆರುಎನಗಿನಿ ಹರು ಕ್ಯಾವ । ಧೀರರೆನುತ ಮನದಿ ಮರುಗಿ । ಧಾರುಣೀಂದ್ರ ನೆನೆದ ತನ್ನಾ । ಪೂರ್ವ ಮಿತ್ರನಾ ॥ ಪೂರ್ವಮಿತ್ರನಾ ॥ ೩ ವಿಂಧ್ಯಕೇತನೆಂಬ ಶಬರ್‍ನ ವಂಧ್ಯಮಿತ್ರನೀರ್ಧ ನವ ಮ । ದಾಂಧತನದೊಳೆಂತು ಎನ್ನ । ಬಂದು ಕ್ಯಾವನೂ ॥ ಬಂದು ಕ್ಯಾವನೂ ॥ ೪ ॥ ಅಷ್ಟಭಾಗ್ಯವಿರಲು ನಮಗೆ । ಇಷ್ಟ ಮಿತ್ರರೆಲ್ಲರಿಹರು । ಕಷ್ಟ ಬರಲು ನೋತ್ರ ನಮ್ಮ ಮುಟ್ಟಿನೋಲ್ಪರೇ ॥ ಮುಟ್ಟಿನೋಲ್ಪರೇ ॥ ೫ ॥ ಕರುಣ ಶರಧಿ ನಿನ್ನ ನನದ । ಶರಣನೆಂಬ ಮಮತೆ ಇರಲು । ಪೊರೆಯದ್ಯಾಕೆ ಬಳಲಿಸುವೆಯ । ಬಂದೆ ಎನ್ನನೂ ॥ ಬಂದೆ ಎನ್ನನೂ ॥ ೬ ॥

ಭಾಮಿನಿ

ಭೂಮಿಪತಿ ಇಂತಳಲುವದ ನೀ । ಸ್ಸೀಮ ವಿಂಧ್ಯಾಧಿಪನು ತಿಳಿಯುತ ತಾ ಮನದಿ ಯೋಚಿಸಿದ ಬಲುತರ ಭವಣೆಗಳ ಮತ್ತೆ ॥ ಅಮಹಾ ವೃಥ ವರ್ಮನೆಂಬುವ । ಗೋಮಿನಿಪಗೊದಗಿರಲು ನಮ್ಮೋಲ್ । ಪ್ರೇಮಿಗಳು ಇದ್ದೇನು ಫಲ ಫಲವಿರದ ಮರನಂತೇ ॥ ೧ ॥

ಕಂದಪದ್ಯ

ಎನುತಂ ಯೋಚಿಸಿ ತನ್ನಯ । ವನಿತೆಯ ಕರೆದಿನಿತುಸುರಿದನಂಗ ನೃಪಾಲಂ ॥ ಗನುಪಮ ಭವಣೆಯು ಬರಲವ । ನೆನೆದಿಹ ಎನ್ನನು ತೆರಳುವೆ ಕಾಳಗಕೆನುತಂ ॥ ೧ ॥

ರಾಗ-ಕೇಶಾರಗಾಳ-ಝಂಪೆ

ದ್ವಿಪರಾಜ ಗಮನೆ ಬಾಲೇ । ಕೇಳ್ ಸರಿ । ಸ್ವಪವೇಣಿ ಮದನ ಲೋಲೇ॥ ಚಪಲಾಕ್ಷಿ ದೃಢವರ್ಮನೂ । ವೈರಿಯುಹ । ನೃಪರೊಡನೆ ಕಾದಲಿನ್ನೂ ॥ ॥ ೧ ॥ ಸೋತ ಕಾರಣ ಎನ್ನನೂ । ನೆನದರಿಂ । ಶೀತಾಂಶು ವದನೆ ನಾನೂ ॥ ಈ ತತೂಕ್ಷಣ ತೆರಳುವೇ । ವೈರಿ ಬಲ । ವ್ರಾತವನು ಸದೆ ಬಡಿಯುವೇ । ॥ ೨ ॥ ಜಾಣೆ ಕೇಳ್ ಮಿತ್ರನವನೂ । ಪೂರ್ವದೊಳು । ಪ್ರಾಣ ಸಲಹಿ ಧೀರನೂ ॥ ಯೇಣಾಂಬಕಿಯೆ ಹೀಗಿರೇ । ಘೊರಮಡದೆ । ಪ್ರಾಣಲಿಂತ ಸುರು ನೀರೇ ॥ ೩ ॥ ಕಾಂತ ಲಾಲಿಪುದು ನಿನಗೇ । ಸಖನವನು । ಯೆಂತೆಂ ಬುದಿಪನು ಎನಗೇ ॥ ನಿಂತರುಹುತಲಿ ಕದನಕೇ । ತೆರಳಯ್ಯ । ಸಂತಸವ ಬಡಿಸಿ ಮನಕೇ ॥ ೪ ॥ ಕಳಕೀರವಾಣಿ ಇದನೂ । ವಿವರಿಸಲ್ । ಕುಳಿತಿರಲು ಸಮಯವನ್ನೂ ॥ ಕಳಿವೆ ತಾನಾದಡೆಲೆಗೇ । ಸಂಕ್ಷೇಪ ದೊಳು ಪೇಳ್ವೆ ಸಲಹಿದ ಬಗೇ ॥ ೫ ॥

ವಾರ್ಧಿಕ್ಯ

ನಾರಿಮಣಿ ಕೇಳ್ ಪೂರ್ವದೊಳು ನಮ್ಮ ತಪ್ಪಲನು । ಕ್ರೂರ ದೌಂಷ್ಟ್ರಕನೆಂಬ ನಿಶಿಚರನು ಮುತ್ತಿರಲು । ಭೂರಿ ಮಾರ್ಬಲ ಸಹಿತ ವೀರ ದೃಢವರ್ಮನೀ ವಾರತೆಯನರಿತು ಬರುತಾ ॥ ಘೋರ ರಕ್ಕಸನ ಸಂಹರಿಸಿ ಬಳಿಕವನ ಪರಿ । ವಾರವನು ದನೆಗೆಡಿಸಿ ನಮ್ಮ ಶಿರ ಕಾದಿಹನು । ದಾರ ಕ್ಷೋಣಿಪಗೊಪಗಡಿರಲು ಮಿತ್ರನೆ ಎನ್ನ ದೂರಲಾರನೆ ಮುಗುಡದೀ ॥ ೧ ॥

ರಾಗ-ಅಷ್ಟ

ಚದುರೆ ಚಂಪಕಸುನಾಸೆ । ಮದಿರನಯುನೆಮಂದಹಾಸೆ । ವನಗಿ ಸೋಳ್ ಮಾರ್ಬಲದ ಕೂಡೆ । ಕದನಕಾಗಿ ಪೋಪೆ ಪ್ರೌಢೆ ॥ ೧ ॥ ಪ್ರಾಣ ಕಾಂತಾ ಲಾಲಿಸಿನ್ನಾ । ಕ್ಷೋಣಿಪ ನೀ ಪರಿಯೋಳ್ ನಿನ್ನಾ । ತಾನೆ ಸಲ ಹಿರಲ್ಕೆ ಸಿತ ಸ । ಮಾನನವನ ಕಾವುದ್ವೆಸೆ ॥ ೨ ॥ ಇನೆಯು ಕೇಳ್ ನೀ ಶೀಘ್ರದೊಳಗೆ । ಮನವ ಮಾಳ್ಪುದಿತ್ತ ಕಡೆಗೇ । ಕ್ಷಣ ನಿನ್ನಗಲಿ ಬಾಳ ಲಾರೇ । ಯೆನುತ ಪೇಳಲ್ಯಾಕೆ ಬ್ಯಾರಿ ॥ ೩ ॥

ಭಾಮಿನಿ

ಕಾಮಿನಿಯ್ರು ಇನಿತುಸುರಿ ತನ್ನಯ । ಪ್ರೇಮದರಸನಿಗಸ್ತ್ರ ಶಸ್ತ್ರಗ । ಳಾ ಮಹಾಗದೆಖಡ್ಗ ತೋಮರ ಕುಂತ ಮುದ್ಗರವಾ || ತಾ ಮುದದಿ ತಂದಿತ್ತು ಬಳಿಕಾ । ಹೇಮದಾರತಿಯೆತ್ತುತರಸಗೆ । ಭಾಮಿನಿಯು ಕಳುಹಿದಳು ವೈರಿಯ ಜಯಿಸಿ ಬಹುದೆನುತಾ || ೧ ||

ಕಂದಪದ್ಯ

ಇತ್ತಲು ಕಾಂತೆಯು ಕಳುಹಲು । ಮತ್ತಾ ವಿಂಧ್ಯಾಧಿಪ ರಥವೇರುತ ರದಿಂ || ಮಿತ್ರನ ಮಂಡಲ ರಜದಿಂ । ಮುತ್ತುವ ತೆರದೋಳ್ ನಡದಂ ಪಟು ಭಟರೊಡನಂ || ೧ ||

ರಾಗ:-ಭೈರವಿ ತ್ರಿವುಡೆ

ಬಂದನಾಗಾ ! ಸಮರಕ್ಕೆ ತಂದನಾಗಾ || ಪಲ್ಲ || ಬಂದನಾ ಶಬರೇಶ ಹಯಕರಿ । ಸಂದಣಿಯೊಡಗೊಂಡು ಮಣಿಮಯ । ಸ್ಯಂಧನವನೇರುತ್ತಲಿಂಗಳ । ವೃಂದವನು ಸದೆಬಡಿದು ಸತ್ತ್ರೈಮ । ಮಂದಿರಕೆ ಕಳುಹುವೆನು ನೋಡೆನು । ತಂದು ಹೂಂಕರಿಸುತ್ತ ಘರ್ಜಿಸಿ । ಮುಂದರಿಸುತಲಿ ರಥಿಕರನು ಧರ । ಣೇಂದ್ರನಲ್ಲಿಗೆ ವಿಂಧ್ಯಕೇತನು || ಬಂದನಾಗಾ । ಸಮರಕ್ಕೆ ತಂದನಾಗಾ || ೧ ||

ಭಾಮಿನಿ

ಧಾರುಣೀಶ್ವರ ಲಾಲಿಸಿತ್ತಲು । ವೀರ ದೃಢವರ್ಮಕನು ಬಂದಿಹ । ಶೂರರನು ನೋಡುತ್ತ ತೋಷಿಸುತವರ ಮನ್ನಿಸುತಾ || ಭೂರಿ ವೈಭವದಿಂದಲವನು ವಿ । ಚಾರಿಸಿದ ವಿಂಧ್ಯೇಶ್ವರನೆ ತವ । ನಾರಿಮಿತ್ರರು ಕುಶಲಿಗರೆಯೆನಲೆಂದನವನೊಡನೇ || ೧ || ಚಿತ್ತವಿಸು ಕ್ಷೋಣಿಪನೆ ತನ್ನಯ । ಮಿತ್ರ ಮಂಡಳಿ ಕ್ಷೇಮದಿಂದಲಿ । ರುತ್ತಿಹರು ನಿನ್ನಯ ಕಟಾಕ್ಷದಿ ಕುಶಲವಾರ್ತೆಗಳೂ || ಅತ್ತಿರಲಿ ಶಿರೆವಿಡಿದ ಖಳ ತಾ । ನೆತ್ತಲಿಹ ತೋರೆನುತ ಘರ್ಜಿಸೆ ಚಿತ್ರಕೇತನು ತಿಳಿದು ಮಾರ್ಮಲೆತುಸುರಿದನು ಭರದೀ || ೨ ||

ರಾಗ-ಮೆಚ್ಚು-ಅಷ್ಟತಾಳ

ಘಡಕುಳಿಂಪಕ ಕೇಳ್ ಮದಾಂಧನೇ । ಇಂಥಾ । ಬಡಿವಾರವ್ಯಾತ ಕೊಸುನ್ನುನೇ ॥ ಪೊಡವಿಪನಸು ಯುದ್ಧ ಕಣದೊಳೂ । ಶಿರೆ । ವಿಡಿದೀರ್ಪ ವೀರ ತಾನಹೆ ಕೇಳೂ ॥ ೧ ಹುಡುಗ ಮುಚ್ಚಲೆ ಬಾಯ ಕ್ಕೋಸುವೇ । ನಿನ್ನ ಹೊಡೆವ ಮಾರಿಗೆ ಹಬ್ಬ ಉಣಿಸುವೇ ॥ ಒಡನೆ ಮಿತ್ರಗೆ ತೋಷ ಬಡಿಸುವೇ । ನೋಡು । ಕಡುಗಲಿತನವೀಗ ನಿಲಿಸುವೇ ॥ ೨ ॥ ಮಿತ್ರಸೆನ್ನುತೆ ಪಡೆವೆರಸುತಾ । ಬಂದು । ಪೃಥ್ವಿಪಗೆಸೆಯಾದ ಕೇಳಿತ್ತಾ ॥ ಧೂರ್ತನೆ ಶಿರವ ತುಂಡಿಸುತೀಗಾ । ನಿನ್ನ । ಮಿತ್ರಸುತಗೆ ಒಪ್ಪಿಸುವೆ ಬೇಗ ॥ ೩ ॥ ಸಾಕು ಸಾಕೆಲೊ ಇಂಥಾ ಹಮ್ಮಿನಾ । ಬರಿ । ಕಾಕು ಮಾಕೇನು ಪ್ರಯೋಜನಾ ॥ ಜೋಕೆಯೋಳ್ ಪೋಗು ನೀ ಬಂದಂತೇ । ಪೋಗಿ । ಸಾಕಿದವಗೆ ಪೇಳು ಬರುವಂತೇ ॥ ೪ ॥ ನದವನ್ನುತ್ತರಿಸದ ಪಿಸುಣನೂ । ಮಕೋ । ದಧಿಯ ದಾಟುವದೆಂತು ಉಸುರಿನ್ನೂ । ಮೊದಲಿನ್ನ ಕದನದಿ ಗೆಲು ನೀನೂ । ಸಲ । ಹಿದವರ ಬಗೆಯದಕಿನ್ನೇನೂ ॥ ೫ ॥ ಮಾತಿನೋಳ್ ಚಪಳನೆನ್ನುತ ನಾನು । ಮನಃ । ಪೂರ್ತಿ ಬಲ್ಲೆನು ಕೇಳು ನಿನ್ನನೂ ॥ ಘಾತಿಪದಿರೆ ನಾನು ಶಬರನೇ । ಮೇಣೀ ಭೂತಳದೊಳು ಮೊಗದೋರ್ಪನೇ ॥ ೬ ॥

ರಾಗ-ಶಂಕರಾಭರಣ-ಮಟ್ಟೆ ತಾಳ

ಘಾತಿಸುವ ಸಹಾಸಿಯೆಂಬು । ದರಿತೆ ಕೇಳೆಲೋ ॥ ಈ ಕ್ಷತದಕ್ಷಣ ದಲಿ ನಿನ್ನ । ಗೆಲುವೆ ನೋಡೆಲೋ ॥ ೧ ॥ ಬರಿದೆ ಪಂಥವ್ಯಾಕೊ ನಿನಗೆ। ತರಳ ಸುಮ್ಮನೇ ॥ ಹರಣಕ್ಯಾವ ಭಟನದಾರೊ । ಒರೆಯೊ ಘನ್ನನೇ ॥ ೨ ॥ ಯೆನುತಲಸ್ತ್ರ ತತಿಯ ಬಿಡಲು । ಚಿತ್ರಕೇತನೂ ॥ ಕನಲಿ ಘರ್ಜಿಸುತ್ತಲ ವನು । ಪುಡಿಯ ಗೈದನೂ ॥ ೩ ॥ ಭಳಿರೆ ವೀರನಹೆಯೊ ಎನುತ । ವಿಂಧ್ಯಕೇತನೂ ॥ ಬಳಿಕ ನೂರು ಶರದೊಳವನ । ಧನುವ ಕಡಿದನೂ ॥ ೪ ॥

ರಾಗ-ಭೈರವಿ-ಏಕತಾಳ

ಚಾಪವಕಡಿಯಲ್ಕಾಗಾ । ಪ್ರತಿ । ಚಾಪವ ಕೊಂಡತಿ ಬೇಗಾ ॥ ಭಾಪೆನುತಲಿ ಶಬರನಿಗೆ । ಬಲು । ಕೋಪಿಸಿ ಶರಬಿಡಲಾಗೇ ॥ ೧ ॥ ಕಂಡಾ

ಕ್ಷಣ ವಿಂಧ್ಯೇಶಾ । ನವ । ಖಂಡಿಸುತಲಿ ಬಲು ರೋಷಾ ॥ ಗೊಂಡಾ ಪೊಸ ಚಾಪವನೂ । ಮೂರ್ । ತುಂಡಿಸಿ ಕೆಡಹಿದನವನೂ ॥ ೨ ॥ ಖೂಳ ಕಿರಾತ ಕೇಳಿತ್ತಾ । ಧನು । ಬೀಳಲ್ಕೇನ್ ಘನಮತ್ತಾ ॥ ಕೋಳಿನ ಬಲ ನೋಡೆಂದೂ । ಬಲು । ತಾಳುತ ರೋಷವನಂದೂ ॥ ೩ ॥ ಗದೆಯನು ಗೊಳುತಾಕ್ಷಣದೀ । ಮ । ತ್ತದ ಶಬರೇಂದ್ರನ ಶಿರದೀ ॥ ಒದಗಿಲಿ ಚಿತ್ರ ಧ್ವಜನೂ ಹೊಡೆ । ನೃಪ ತಿಳಿದಾಕ್ಷಣಕವನೂ ॥ ೪ ॥ ಸೆಳೆಯಲ್ ಶಬರೇ ಶ್ವರನೂ । ಇದ । ೯ಳಿಯುತ ಚಿತ್ರಧ್ವಜನೂ ॥ ಝಳಪಿಸಿ ಖಡ್ಗವ ಭರದೀ । ಶಿರ । ಕಳಚುವೆ ನೋಡೀ ಧುರದೀ ॥ ೫ ॥ ಎಂದಾಕ್ಷಣ ಹೂಂಕರಿಸೀ ಬರು । ವಂದವ ತಿಳಿದಾ ಸಹಸೀ ॥ ಬಂದನ ಕಸಕೊಳಿ ಜವದೀ । ಮೇಲ್ ಕಂಡ ಕೈ ಸೋತನು ಕಣದೀ ॥ ೬ ॥

॥ ಕಂದಪದ್ಯ ॥

ಇವನರಿತಾ ಶಬರೇಶಂ । ಕವನದಿ ತರಳನ ಗೆಲಿವೆನು ತಾನೆಂದೆನುತಂ ॥ ಮದಗರ್ವವ ತಾಳುತಲೊದ । ಿದ ಬಳಿಕಾ ಸಚಿವನ ಕುವರನೊಳತಿ ಭರದಿಂ ॥ ೧ ॥

ಭಾಮಿನಿ

ಮರುಳೆ ಕೇಳ್ ರಣವರಿಯನರಿಯುವೆ । ಹರಿಯ ತುತ್ತಿಗೆ ಸಿಕ್ಕಿ ಬಿದ್ದಿಹ । ಕುರಿಯುತೆರದಲಿ ಬಂದೆ ತನ್ನಲಿ ಕಾದಲೆನುತೀಗ ॥ ಕೊರಳ ಕ್ಯಾವ ವನೆಲ್ಲಿಹನು ಯೆನ । ಗೊರೆ ಯೆನುತ ಖಡುಗವನು ನೆಗೆಯಲು । ಧರಣಿಪತಿ ಇವನರಿತು ಬಂದಿಂತೆಂದನವನೊಡನೇ ॥ ೧ ॥

ರಾಗ–ಕಾಂಭೋಧಿ ಅಷ್ಟತಾಳ

ಚಿತ್ತವಿಸೀಗೆನ್ನಾ ಮಾತಾ । ನಿನ್ನೊಳ್ । ಬಿತ್ತರಿಪುದು ವಿಂಧ್ಯನಾಥಾ ॥ ಮತ್ತಾ ಕುವರ ಕಾದಿ ಹೊತ್ತು ಕೈಸೋತೆನೆಂ ॥ ಮತ್ತಮವೆ ಕಡೆ ಯೋಚ

ಸುವದಾ । ಪತ್ತಿನೊಳಗಿಹ । ಕ್ಷತ್ರಿಪುತ್ರನ ॥ ೧ ॥ ಸಾಯಕಂಗಳನೆಲ್ಲ ಕಳೆದೂ । ಈಗ । ನಾಯಕನಾಗಿಹ ದಣಿದೂ ॥ ನ್ಯಾಯವೆ ಭುಜ ಲಕ್ಷ್ಮೀ ತಾಯಿ ತೊಲಗಳೆ ಮೇಣ್ ॥ ನೋಯಿಸಲ್ಕೀ ತರಳನನು ಪರ । ರಾಯ ರೊರೆನರ । ನ್ಯಾಯಿಯೆನ್ನುತಾ ॥ ೨ ॥ ಅದರಿಂದಲಿವನ ಬಂಧನೆಯೋ । ಳಡು । ವುದು ಯೋಗ್ಯವೆಂಬುದನರಿಯೋ ॥ ಇದು ಹೊರತಿನಿತಾದ । ಹದನವ ನರಿತೆಮ್ಮೊ ॥ ಕೊದಗುವರು ಕಾಳಗದೊಳೀತನ । ಕದನಕಟ್ಟಿದ ॥ ಚದುರ ಭೂಪರು ॥ ೩ ॥ ತೋರು ಶೌರ್ಯವ ವೀರರಲ್ಲಿ । ಮತ್ತೆ । ಗಾರುಗೆಡಿಸಿ ರಣವಲ್ಲಿ ॥ ಸೇರಿಸು ಖಳನು । ಸೌರಿಯ ಪುರದೊಳೀ । ಪೋರನನು ಸಂಹ ರಿಸದಿರು ಅವಿ । ಚಾರದೊಳು ಧುರ । ಧೀರ ಸುಮ್ಮನೇ ॥ ೪ ॥

ಭಾಮಿನಿ

ಅರಸನಪ್ಪಣೆಯಂತೆ ಶಬರೇ । ಶ್ವರನು ಬಳಿಕಾ ಚಿತ್ರಕೇತುವ । ಶಿರಿ ಮನೆಯೊಳಿಟ್ಟೀರ್ದನೆತ್ತಲು ಪೋಗದೋಲಿಸಿತೂ ॥ ಪರಿಕಿಸುತ ಪೊರಟಾ ಗಳೋರ್ವನು । ಚರನು ಬಂದಾ ಭದ್ರಸೇನನಿ । ಗೆರಗಿ ಬಿನ್ನವಿಸಿದನು ಬಹು ತರ ಭಯವ ತಾಳುತಲೀ ॥ ೧ ॥

॥ರಾಗ, ಮುಖಾರಿ, ಏಕತಾಳ॥

ಲಾಲಿಸೈ ಭದ್ರಸೇನಾ ಧೊರೆಯೇ । ಸೌಭಾಗ್ಯದ ಸಿರಿಯೇ । ಲಾಲಿಸೈ ಭದ್ರಸೇನಾ ಧೊರೆಯೇ ॥ ಪಲ್ಲ ॥ ತರಳಾ ಸಚಿವ ಪುತ್ರ ತಾನೂ । ವರ ಚಿತ್ರಧ್ವಜನೂ । ಧುರದೋಳ್ ಕೆಡಹಿದ ವೀರರನ್ನೂ ॥ ಕರಿ ತುರಗವ ಸಂ । ಹರಿಸುತ ದಳವನು । ತರಣಿಸುತನ ಪುರ । ವರಕಟ್ಟುತ ಮೇಣ್ ।ಮೆರೆ॥ ದನು ಶಕ್ರನ ತರಳನ ಸುತನೋ । ಉರುವಿಕ್ರಮನಿದ ನೊರೆಯಲಿನ್ನೆಂತೂ ॥ ೧ ॥ ಪೊಡವೀಪ ದೃಢನರ್ಮ ತಾನಾಗಾ । ಸಂಗರಕತಿಬೇಗಾ । ಪಡೆ ಕೂಡಿ ಬಂದು ಕಾದುತಾಗಾ ॥ ಹುಡುಗಗೆ ಶರಗಳ । ಬಿಪಲದ ಖಂಡಿಸಿ ತಡೆಯದೆ ಭೂಪನ ಕಡು ಹಮ್ಮುಗಳೂ । ಕೆಡುಸುತಲಿವ ಶಿರವಿಟವನು

ಭೂಪನ । ಪಡೆಯನೆ ಲಾಲಿಸು ಕಡೆಪರಿಗಳನೂ ॥ ೨ ॥ ಬಳಿಕೋರ್ವಶಬರ ನೈದಿ ರಣದಿ । ಮಾರ್ಬಲವನು ಕಣದೀ । ಗೆಲಿದೂ ಮುಂನೊತ್ತಿಬರಲು ಜವದೀ ॥ ತಿಳಿದಿದನೆಲ್ಲ ತರಳ ರೋಷದಿ ಶರ ಮಳೆಯನು ಗರೆವುತ ; ಘಳಿಲನೆ ಶಬರನೊ | ಳ್ವಿಯುಗೊಡಲಾ ಖಳನಿವನನು ಕ್ಷಣ । ದೊಳು ಕರೆಬಿಡಿಯುತ ಲೀಲದ್ಭೊದಿಹನೂ । ೩ ।

ಕಂಡ ಪದ್ಯ

ನುಡಿಯಂ ಕೇಳುತ ಭೂಪಂ | ಕಡೆಗಾಲದ ಮೃಢನಂದದಿ ಕೋಪಿಸಿ ಬಳಿಕಂ ॥ ಘುಡಿ ಘುಡಿಸುತ ನಯನದೊಳಂ ಕಿಡಿ ಇಡುತೆಂದನು ಮಂತ್ರಿ ಯೊಳತಿಭರದಿಂ ॥ ೧ ॥

ರಾಗ-ಸೌರಾಷ್ಟ್ರ- ತ್ರಿವುಡೆ

ಕೇಳೆಲವೊ ಮಂತ್ರೀಶಸಂಗ ನೃ | ಪಾಲನಲ್ಲಿಗೆ ಕಲಹಕೈದಿಹ | ಬಾಲ ನನು ಕರೆವಿಡಿದನಂತಾ । ಖೂಳನೃಪನೂ ॥ ೧ ॥ ಇಂತರಿತು ಕಾಳಗಕೆ ಪೋಗದೆ | ಕುಂತಿರಲ್ಕನುಚಿತವು ಈಕ್ಷಣ | ಸಂತೆ ಹವಣಿಸು ಬಲವ ಪೊರೆಮಡು । ವಂತೆ ಧುರಕೇ ॥ ೨ ॥ ಎನುತನುಜ್ಞೆಯನಿತ್ತು ಭಪಾ । ಖ್ಯನು ಧನುಬಾರ್ಣವನು ಗೊಳುತಲಿ । ಮನವ ಮಾಡುತ ಪೊರಟ ದೃಢವರ್ । ಮನೊಳು ರಣಕೇ ॥ ೩ ॥ ಪೇಳಲೇನ್ ಜನನಾಥ ರಾಯನ | ಪಾಳಯವು ಪರ್ವದಿ ಸಮುದ್ರದೊ । ಳೇಳುತಿಹ ತೆರೆಯಂತೆ ನಡೆದುದು । ಕಾಳಗಕ್ಕೇ ॥ ॥ ೪ ॥ ಚೂಣು ನಡೆವಬ್ಬರದೊಳಾಗಸ । ಕಾಣದಂತಿರೆ ರಜದಿ ಮುತ್ತ । ನ್ನೇನೆ ನುವೆ ರಾವುತರ್ಘೋಷಕೆ । ಕ್ಷೋಣಿಪಾಲಾ ॥ ೫ ॥

ವಾರ್ಧಿಕ

ಧರೆಯಧಿಪ ಲಾಲಿಸೈ ಇಸಿತಬಿಲ ಮಾರ್ಬಲವು । ಗಿರಿನದಂಗಳನುತ್ತರಿಸಿ ಮುಂದೆ ನಡೆತಂದು । ಧರಣಿಪತಿ ವೃಷವರ್ಮನಾಳ್ವ ಸೀಮೆಯನರಿತು ಪೊಕ್ಕುದಾದುರ್ಗವನ್ನೂ ॥ ಪುರವ ಮುತ್ತುತ್ತಿರುವದನು ತಿಳಿದು ಭೂಮಿ

ಪತಿ । ಯರಿಗಳೊಳುಕಾದಲ್ಕೆ ರಥಿಕರಿಂದೊಡಗೂಡಿ । ಬರುತ ಪರಸೈನ ಮಂ ದೆಸೆಗೆಡಿಸುತನುನಾದ ಭದ್ರಸೇನನೊಳು ಧುರಕೇ ॥ ೧ ॥

॥ ರಾಗ, ತುಜಾವಂತು, ಮಟ್ಟೆ ತಾಳ ॥

ಆರೆಲೋ ನೃಪಾಲ ಕುವರನೇ । ಧೀರ ಕರಿರಥಾಶ್ವಚಯವ । ಸೇರಿ ಬಂದು ಪುರವ ಮುತ್ತಿ । ಗಾರುಗೆಡಿಸಿ ಮುಂದುವರಿವ । ಪಾರಸತ್ವನಹೆಯೊ ವೆತ್ತ । ವೀರನಾರು ಪೆಸರದೇನೆಲೊ । ನೀನಿರ್ಪ ನ.ಗರ । ಕಾರು ಒಡೆಯು ನೆಂಬುದುಸುರೆಲೋ । ಬಂದಿರುವರಿಲ್ಲಿ । ಕಾರಣವನು ನುಡಿಯೊ ಬೇಗೆಲೊ ॥ ॥ ೧ ॥ ಅಂಗಜಯ್ಯನ ಸುಪದಾಬ್ಜ ಭೃಂಗಮಿತ್ರವ್ಯಂಪ ಕುಮುದ । ತಂಗ ದಿರ ಮದಾಂಧ ನೃಪಮಾ । ತಂಗ ಪಂಚ ವದನನೆನಿಸು । ವಂಗ ಧಾತ್ರಿ ಯೊಡೆಯನಾಗಿಹೇ । ವೃಢಪರ್ಮನೆಂಬ । ತುಂಗನಾಮಧೇಯ ಪಡೆದಿಹೇ । ನೀ ಕಾದಲೆನುತ । ಅಂಗವರಿಯದಿಲ್ಲಿ ಬಂದಿಹೇ ॥ ೨ ॥ ವಸುಧೆಪಾಲ ಕೇಳು ಧರೆಯೊ । ಳೆಸೆವ ವರ ಕಳಿಂಗ ಪುರದ । ರಸ ಭದ್ರಾಖ್ಯನೆಂದು ತನ್ನ । ಪೆಸರು ಧರಣಿಪಾಲರೊಳಗಿ । ನ್ನ ಸಮ ವೀರನೆಂಬುದರಿಯೆಯಾ । ನಾವ್ ಬಂದ ಪರಿಯ । ನುಸುರಲೇನು ನಿನ್ನ ಕುವರಿಯಾ । ಕೊಂಡ್ಯೊದು ಲಗ್ನ । ವೆಸಗ ಬೇಕೆನುಪದ ಮರೆತೆಯಾ । ಯಾಕೆಲೋ ವಿಚಾರ ಸುಮ್ಮನೇ ॥ ೩ ॥

॥ ರಾಗ, ಘಂಟಾರವ, ಅಷ್ಟತಾಳ ॥

ಸಾಕು ಸಾರೆಲೊ ಇನಿತು ಹೆಗ್ಗಳಿಸುವ । ದಾ ಕೆ ನಿನ್ನನು ಬಡಿದು ಕಳಚುವೆ । ಪೋಕ ತೆರಳ್ಕೆ ಘಮ್ಮನೇ ॥ ೧ ॥ ತರಳನೋರ್ವನು ಬಂದು ಕಾದುತ ಮತ್ತೆ । ಶೆರೆಯೊಳಿಹ ನೀನವನ ತೆರದೊಳು । ಬರಿದೆ ಕೊಡದಿರ್ ಪ್ರಾಣವಾ ॥ ೨ ॥ ಮಂಕು ಭೂಪನೆ ಬಿಡು ನಿನ್ನ ಬಡಿವಾರಾ । ಶಂಕರನ್ನು ಬರಲೊಮ್ಮೆಗಾತನ । ಬಿಂಕ ನಿಲಿಸುವೆನಿನಿತಿರೇ ॥ ೩ ॥ ಬಗೆವೆನೇ ನಿನ್ನ ಸಮರದಿ ಹೊಡೆದುರ । ಬಗೆದು ಶಾಕಿನಿ ಢಾಕಿನಿಯರಿಗೆ । ಮಿಗಿಲು ತೋಷವ ಬಡಿಸುವೇ ॥ ೪ ॥ ಎಂದು ಕೋಲ್ಗಳ ನೆಸೆಯಲು ಭೂಪನು । ಎದಿರಪ ತೆರನಂತೆ ಖಂಡಿಸು । ತಂದು ಮರು ಶರವೆಸೆಯಲೂ ॥ ೫ ॥ ನಭದ್ರಸೇನನು ಬಳಿಕ ರೋಷದೊಳವ । ಭಿದ್ರಿಸುತ ತಾನೆಚ್ಚ ಕಡುಬಿಸೊ ।

ಶದ್ರಿ ಶರವನು ಭೂಪಗೇ ‖ ೬ ‖

‖ ಭಾಮಿನಿ ‖

ಗೋತ್ರ ಶರಹತಿಯಿಂದೆ ಭೂಪನು | ಧಾತ್ರಿಗೊರಗಲು ಶಬರರೊಡೆಯ ವಿ। ಚಿತ್ರತರದಸ್ತ್ರಗಳ ಧರಿಸುತ ರೋಷ ಮಿಗೆ ಪೇರ್ಚೀ ‖ ನೇತ್ರವೊಳು ಪಿಡಿಗೆವರಿ ಬಳಿಕಾ | ಚಿತ್ರಕಾಯನ ತೆರದಿ ಘರ್ಜಿಸಿ । ಕ್ಷತ್ರಿಯನಿಗಿದಿರಾ। ಮುಖದಿಂತೆಂಪನಪನೊಡನೇ ‖ ೧ ‖

ರಾಗ–ಶಂಕರಾಭರಣ–ಮಟ್ಟೆತಾಳ

ಎಲ್ಲಿ ಪೋಪೆಯಧಮ ಮನುಜ | ನಿಲ್ಲು ನೃಪನ ಗೆಲ್ದ ಹಮ್ಮ | ನಿಲ್ಲಿಸು ಪೆನು ನೋಡು ತನ್ನ । ಮಲ್ಲ ಸಾಹಸಾ ‖ ೧ ‖ ಎನುತಲಸ್ತ್ರ ಬಿಡಲು ಕ್ಷಿತಿಪ । ಮನದಿ ಕೋಪಿಸುತ್ತಲವನು । ಗಣಿಸದಾಗ ಪುಡಿಯಗೈದು | ಗನಲು ತೆಂಪನೂ ‖ ೨ ‖ ಕ್ಷುದ್ರ ಶಬರ ಕೇಳುಜನಪ | ಬಿದ್ದಿಹನು ಕೈಸೋತು ರಣದಿ । ಹೊದ್ದಿಪೆನು ನೋಡವನೊಳೀಗ | ಯುದ್ಧರಂಗದೀ ‖ ೩ ‖ ಹುಲು ನೃಪಾಲ ಕೇಳು ಬಾಯ । ಗಳಹಲೇಕೆ ನಿನ್ನನೆಮಗೆ ‖ ತಲುವದೀಗ ಲೊಪ್ಪಿಸುವೆನು । ತಿಳಿಯೆನುತ್ತಲೀ ‖ ೪ ‖ ಕೂರ್ಗಣೆಗಳನೆಸೆಯೆ ಮಧ್ಯ | ಮಾರ್ಗದೊಳಗೆ ತರಿದು ನೃಪತಿ | ಭೋರ್ಗರೆವುತಲೆಸೆವ ಸರಳ । ವರ್ಗ ವಾಕ್ಷಣಾ ‖ ೫ ‖ ಮತ್ತೆ ಶಬರ ಶೂಲಧರನೋ | ಲೆತ್ತು ಕೋಪವನ್ನು ಭರದಿ । ಕತ್ತರಿಸಲು ತಿಳಿದು ಜನಪ | ಪತ್ತು ಬಾಣದೀ ‖ ೬ ‖ ತೇರ ಪುಡಿಯ ಗೈವುತವನ | ಸಾರಥಿಯನು ಸೌರಿ ಪುರಕೆ | ಸೇರಿಸುತ್ತ ಬಳಿಕಲೆಚ್ಚ । ನೂರು ಶರವನೂ ‖ ೭ ‖ ಶರಹತಿಯೊಳು ಪಲ್ಲಿಕಿರಿದು | ಧರಣಿಗೊರಗೆ ಸಂಸ್ಕೃತಿಯನು । ತೊರೆದ ತೆರದೊಳೀರ್ದ ಕೇಳು । ಧರಣಿಪಾಲಕಾ ‖ ೮ ‖

ಕಂದ ಪದ್ಯ

ಚಿತ್ರನಿಸೆಲಿ ವಸುಧಾಪತಿ । ಇತ್ತಾ ಶಬರನು ಮಡಿಯಲ್ ದೃಢ

ವರ್ಮಂ ॥ ಭೂಪೋತ್ತಮ ಮೂರ್ಛೆಯ ತಿಳಿದೇ । ಳುತ್ಪಾಕ್ಷಣ ನಡೆತಂದಂ ಹರಿಬಕೆ ಜವದಿಂ ॥ ೧ ॥

॥ ಭಾಮಿನಿ ॥

ಬರುತ ರಣರಂಗದೊಳು ಬಿದ್ದಿಹ ।ಪರನು ಮಿತ್ರನ ನೋಡಿ ಧರಣೀ ।ಶ್ವರನು ದುಗುಡದೊಳಶ್ರುಜಲವನು । ಸೂಸಿ ದುಃಖಿಸುತಾ ॥ ಹರ ಹರಾ ತನಗಾಗಿ ರಣ ದೊಳು ಹರಣ ತೆತ್ತಿಹ ವೈರಿ ಬಲಕಿ । ನ್ನರರೆ ದುರ್ಗತಿಯಿಂತಡಸಿತೆಂ | ದೆನುತ ಮರುಗಿದನೂ ॥ ೧ ॥

॥ ರಾಗ–ನೀಲಾಂಬರಿ- ಆದಿತಾಳ

ಆಕಟಕಟಾ ರಣ ಧೀರಾ । ಪ್ರಕಟಿಸಲೇನ್ ಭಯ ದೂರಾ ॥ ವಿಕಟದೊಳು ಕ್ಷಿತಿ ತಿಲಕಾ । ಶಕುತಿಯ ಪೀರ್ದನೆ ಕೃತಕಾ ॥೧॥ ಎನ್ನನು ಕಾಯಲು ಬಂದೂ । ಚೆನ್ನವೆ ಮೌನವು ಇಂದೂ ॥ ಇನ್ನ್ಯಾರೂ ತನಗಿಹರ್ಯೆ । ಸನ್ಮಿತ್ರಾ ಯೆನಗರುಹ್ಯೆ ॥೨॥ ಯಾತಕೆ ನಿನ್ನನು ಕರೆದೇ । ಘಾತಿಸಲೂ ತಾ ಬಂದೇ ॥ ಭೂತ ಪತೇ ಕರು ಣವನೂ ಸೀತೊರೆಯೇ ಇನ್ನೇನೂ ॥ ೩ ॥

॥ ಭಾಮಿನಿ ॥

ಈ ಪರಿಯೊಳಳಲುವ ಧರೇಶನ | ತಾಪವನು ಕಂಡಾಗ ಭದ್ರನು । ಕೋಪಿ ಸುತಲಿಂತೆಂದ ಮರುಳು ನೃಪಾಲ ಕೇಳಿತ್ತಾ ॥ ಈ ನೆಣನ ಮೇಲ್ಬಿದ್ದು ಸುಮ್ಮ ನೆ । ನೀ ಪ್ರಳಾಪಿಸಲೇಕೆ ಕರಗಳ ಚಾಪಕೋಲ್ಗಳ ಬಿಸುಟಿಯೋ ಯೆನ ಲೆಂದ ಘರ್ಜಿಸುತಾ ॥ ೧ ॥

॥ ರಾಗ - ಶಂಕರಾಭರಣ–ಮಟ್ಟೆತಾಳ ॥

ಖಳ ಧರಾಧಿಪಾ । ವದರಲೇತಕೇ । ಕಳೆವೆ ನಿನ್ನನೂ ನಿಮಿಷಮಾತ್ರದೀ ॥ ಜಲಜ ಸಂಭವಾ । ಬರಲು ಗೆಲುವೆನೂ । ಕಲಹ ಮಧ್ಯದೀ ಯೆನುತ ನುಡಿದನೂ

||೧|| ಧಾತ್ರಿ ಪಾಲನೇ । ಕೇಳು ನಿನ್ನ ಯಶಾ । ಮಿತ್ರನೋರ್ವನೊ ಕಾದಿ ರಣದೊಳು || ಪೃಥ್ವಿಗೊರಗಿಹಾ । ನವನ ತೆರಹೊಳೂ । ಮಿತ್ರಸುತನಿಗೇ ನಿನ್ನ ಕಳುಹುವೇ ||೨|| ಹುಚ್ಚು ಭೂಪನೇ । ಬರಿದೆ ನುಡಿಯುನೂ । ಹೆಚ್ಚುಗೈವೆ ಯಾ । ಕೀಗ ನಿನ್ನನೂ || ನುಚ್ಚುಗೈಯುವೇ । ನೆನುತ ಕಣೆಗಳಾ । ನೆಚ್ಚಡಾನ್ಯಪಾ । ತರಿವುತುರು ಶರಾ ||೩|| ಮತ್ತೆ ರೋಷದೋ । ಳಾಡುಗಚ್ಚುತಾ । ಯೆತ್ತಿ ಹೊಡೆಯುಲಾ । ನೃಪಗೆ ಶರವನೂ ॥ ನೆತ್ತಿ ತಿರುಗುತಾ । ಬಳಲಿ ಕಣದೊಳೂ । ಮಿತ್ರಪಾಲನೂ । ಬಿದ್ದ ಧರೆಯೊಳೂ ॥ ೪ ॥

|| ವಾರ್ಧಿಕ್ಯ ||

ಕ್ಷೋಣೀಶ ಕೇಳುವೃಷವರ್ಮ ಪುನರಪಿ ಹತಿಗೆ । ತ್ರಾಣಗುಂದುತ ಮೂರ್ಛಿಸಲ್ಕೆ ಭವಾಬ್ಧಿ ನೃಪ । ಕಾಣುತಿವನಾಗ ತೋಷಿಸಿ ಬಂಧನದೊಳಿರುವ । ಚಿತ್ರಕೇತನನು ಕರೆಸೀ ॥ ಕ್ಷೀಣಪಟ್ಟಿಹ ತರಳನನು ಕಂಡು ಭೂಪ ದು । ಮ್ಮಾನ ತಾಳುತ ನುಡಿದ ಕುವರ ಕೇಳೆನಗಾಗಿ | ಬಾಣಹತಿಯಿಂದಧಿಕ ಕಷ್ಟಬಟ್ಟೆಯೊ ಯೆನುತ । ಮಮತೆಯಿಂದುಪಚರಿಸಿದಾ || ೧||

|| ರಾಗ–ಭೈರವಿ–ಝಂಪೆತಾಳ ||

ಕಂಡಾ ಕೇಳೆನಗಾಗೀ । ಬಂದೂ ಕಾಳಗದಿ ಬಲು । ನೊಂದೂ ಬಳಲಿದೆ ಇಂಥಾ| ಬಂಧನೆಯೋಳ್ಸಿಲುಕೀ ॥ ೧ ॥ ಆಗ ಗಳಿಸಿಹ ಕಾರ್ಯಕ್ಕಾಗಿ ಚಿಂತಿಸಲು ಫಲ । ವಾಗುವುದೇ ಇದರಿಂದಾ ನೀಗಿ ಕಳೇ ದುಗುಡಾ ||೨|| ತರಳಾ ನಿನ್ನನು ಶಿರೆಯೋಳಿರಿಸಿದ ಅಧಮನು ಧರೆಯೋ । ಳಿರಲುಂಟೇ ಶ್ರೀಮಿಸಿಗೇ । ತೆರಳಿಹನೂ ರಣದೀ || ೩ ||

॥ ಭಾಮಿನಿ ॥

ಇನಿತು ತರಳನ ತಕ್ಕವಿಸುತಾ । ಜನಪನನೊಡನೆಂದ ಕೇಳೈ । ಸನುಮತದಿ ನೀ ತೆರಳು ಮಾರ್ಬಲ । ದೊಡನೆ ಪುರವರಕೇ ॥ ಅಸಿತದೊಳು ತಾ ತರುವೆ ತರಳೆಯು । ನೆನುತ ಕಳುಹಿಸಿ ಭದ್ರಸೇನನು । ವನಜನೇತ್ರೆಯ ತೇಲು ಪೊಕ್ಕನು

ಗಾಜ. ನಾಲಯವಾ ॥ ೧ ॥

ರಾಗ–ತೋಡಿ–ಅಷ್ಟತಾಳ

ಕೇಳಿತ್ತ ಧರಣಿಪಾಲಾ । ನಿನ್ನೊಳು ನಾನು । ಪೇಳ್ವುದ ಸುಗುಣ ಶೀಲಾ॥ ಭೂಲೋಲಾ ಭದ್ರನಾ । ಬಾಲೆಯ ತರಲು ನೃ । ಪಾಲಯವನು ನಿಶಿ । ಕಾಲದಿ ಸೇರುತ್ತಾ ॥ ೧ ॥ ರಾಜನೋಲಗವ ಪೊಕ್ಕು । ಮೇಣಲ್ಲಿ ವಿ। ರಾಜಿಪ ಶಿರಿಗೆನಕ್ಕೂ । ರಾಜೀವ ಸಖನಂತೆ । ತೇಜದಿ ನವರತ್ನ । ರಾಜಿಯಿಂದಿಹ ವೃಗ ! ರಾಜ ಪೀಠವ ನೋಡಿ ॥ ೨ ॥ ಅಚ್ಚರಿಯವ ತಳೆದೂ । ವೈಭವಕಾಗಿ । ಮೆಚ್ಚಿ ಮೇಣವ ಕಳೆದೂ ಅಚ್ಚ ಕುಸುಮಗಂಧಿ । ಗಿಚ್ಚೈಸುತಲಿ ನೃಪ । ಪಚ್ಚೆಗೆತ್ತಿದ ದ್ವಾರ । ಬಿಚ್ಚಿ ಮುಂದೊತ್ತುತಾ ॥ ೩ ॥ ರನ್ನದುಪ್ಪರಿಗೆಗೇರೀ । ನಿದ್ರಾಂಗನೆ । ಯೆನ್ನುವ ಸಖಿಯು ಸೇರಿ ॥ ಕನ್ಯೆರತ್ನಾವತಿ । ಸ್ವರ್ಣ ಪಲ್ಲಂಗದಿ । ಮುನ್ನ ವಿಶ್ರಮಿಸಿಪ್ಪು ದನ್ನ ನಿರೀಕ್ಷಿಸಿ ॥ ೪ ॥ ನನೆಗೋಲನುರುಬೆಗಾಗೀ । ಭೂಮಿಪ ತನ್ನ । ಮನ ಸೋತು ಬಳಿಗೆ ಪೋಗಿ ॥ ವನಿತೆಯ ಸುಂದರಾ । ನನವ ನೋಡುತ ತನ್ನೊ । ಳಿನಿತೆಂದು ನುಡಿದನು । ಘನತೋಷವನು ತಾಳಿ ॥ ೫ ॥

ರಾಗ–ಕಾಪಿ–ಏಕತಾಳ

ಏನನುಸುರಲಿ । ಮಾನಿನಿಯ ಚಲು । ವಾನವದ ಪರಿಗೇ ॥ ಮದ ಗಜ । ಯಾನೆ ಕೋಕಿಲ ಗಾನೆ ಶತಿಯಾನೂನ ಮೊಗ ಶಿರಿಗೇ ॥ ಮತ್ತುಡು । ಸೇನೆ ಯಧಿಪತಿ ಬಾನ ತ್ಯಜಿಸುತಲೀ ನಿತಂಬಿನಿಗೇ ॥ ನಿಟಲವಿ । ಸಾನುರಾಗನೊಳ್ತಾನೆ ವೆರೆಯುತ ಪೂರ್ಣ ಕಿರಿ ಯೆಸಗೇ ॥ ಇದಕನುಮಾನವಿಲ್ಲ ವಿ । ದೇನೆನಲು ಹಗೆ । ಮಾನವಗೆ ತಾನ್ । ಬೇನೆ ಪಡುವಂತೀ ನಳಿನಗಳು ನ್ಯೂನ ಗೊಂಡಿವೆ ಹೀನಿಸುತಲಾ । ಯೇಣಧರನನೂ ॥ ೧ ॥ ಅಂಬುಜಾಕ್ಷಿಯು ಸಂಭ್ರಮದಿ ಮುಗುಳುಂಬಿಸಿಗೆ ತನುವಾ ಇತ್ತಾ । ಡಂಬರದಿ ತನ್ನಂಬಕಕೆ ಮರೆಗೊಂಬ ಪೋಲನುವಾ ॥ ಗೈದಿಹ । ಳೆಂಬುದಿದು ಪುಸಿಯೆಂಬರೇನೆನೆ ರಂಭೆ ತನ್ನನವಾ ಜೇಲೊಂ । ಡಿಂಬುಗೊಳಿಸುತ ಕುಂಭಿನಿಯನಕವಂಬದೊಳು ಚಲುವಾ ಸುರುಷವ

ಹಂಬಲಿಸಿ ಪೇಳ್ । ಬೆಂಬಿಡದೆ ತರೆ ಕಂಬು ಕಂಠಿನಿ ತುಂಬಿರುವ ನಗೆ। ಯೆಂಬ ಬಲೆಯ ಸೌ । ರಂಭದೊಳು ತಾ । ಹಂಬಿಸಿಹಳಾ । ರಂಭದಲ್ಲಿಯೆ ||೨|| ನಾರಿ ರತುನೆಯ ಚಾರು ವದನದಿ ಬೀರುವೆಳೆ ನಗೆಯು || ಕುಂದಲ್ । ಕಾರಣಂ ಗಳು ಬೇರೆ ಮನಸಿಗೆ ತೋರದೀ ಬಗೆಯೂ । ಬಳಿಕಾ । ವಾರಿಜಾಕ್ಷಿಯ ಮೋರೆ ತೊರೆದಿಹ ಭೂರಿ ಸ್ಮಿತ ಬಲೆಯು॥ ಯೆನ್ನನು । ಸೇರಿ ಸುತ್ತುತ ಪಾರಿಗೆಡಿಸೀ ನೀ ರೆ ಯೆಡಗೊಯ್ಯು ॥ ತ್ವರಿಸಿಯ । ಕಾರ್ಯ ಕೆಡದೋಲ್ । ತಾರೆಯಧಿಪಗೆ। ಪೂರ ಒಪ್ಪಿಸೆ । ಧೀರತನ್ನನು । ಸೂರೆಗೊಂಡಿಹ । ಭಾರಿ ಬಳಲಿಸಿ । ಯಾರಿಗೊ ರೆಯಲ । ಪಾರ ಕಷ್ಟವಾ || ೩ ||

|| ಕಂದಪದ್ಯ ||

ಕೇಳವನಿಪ ಭದ್ರಾಖ್ಯಂ । ಬಾಲೆಯನೀಪರಿ ವರ್ಣಿಸಿ ಸುಮಶರದು ರಿಯಂ ತಾಳದೆ ಪುತ್ರಿಂತೆಂದನು । ಲೋಲಾಕ್ಷಿಯ ಸುಂದರ ತನುವಿನ ಸೌಂಭಕಂ ||೧ ||

|| ರಾಗ–ಯಮುನಾ ಕಲ್ಯಾಣಿ–ಅಷ್ಟತಾಳ ||

ಅಮಮ ಯೇನ್ ಬೆಡಗುಗಾತ್ರಿಯೊ ಕನ್ಯೇ । ಕಾಣೆ । ಕಮನೀಯ ಗಾತ್ರೆ ಮನ್ಮಥ ರನ್ನೇ || ಪಲ್ಲ || ಭುವನ ಸ್ತ್ರೀ ನಿಕುರಂಬ ವನದಲ್ಲೀ । ಇಂಥ । ನವ ಮೃದುಲತೆಯುನ್ನು ಇಹುದೆಲ್ಲೀ ॥ ದಿವರಾಜನೆಂತು ಬಂದಿಹನಿಲ್ಲೀ । ಯೆಂದು । ತವೆಸಂಫಿತೋಪ್ರ್ದು ಮನದಲ್ಲೀ || ೧ ॥ ನಾಗವೇಣಿಯ ಮುದ್ದು ಮೊಗಕಾಗೀ । ಮೇಲ್ಪೈ । ರಾಗಿಗಳ್ ಸಹ ಸೋಲ್ವರ್ಮನ ಸೀರೀ || ನಾಗಿಯೊಳ್ ದಣಿದ ಪಾಂಥಿಕ ತಾನೂ । ಪಮ್ಮಾ । ನಾಗ ನಡೆಯು ನೋಡೆ ತೃಷೆಯನ್ನೂ ॥ ೨ || ತೊರೆವ ತಾಸಿದ ಸಿದ್ಧ ವನಜಾಕ್ಷಿ ಗೆಣೆ । ಇರದಿವು ನಿಜ ಮಾರಸುತ ಸಾಕ್ಷೀ || ಸುರ ತರುಣಿಯರಿಂಗೀ ಸೊಬಗನ್ನೂ । ಪೂರ । ದೊರೆವುದಸಾಧ್ಯವಾಗಿಹುದಿನ್ನೂ ॥ ೩ ||

॥ ಭಾಮಿನಿ ॥

ಜೇದಬಿಜ್ಜಗನೀ ತರುಣಿಯನು । ಸಾದರದಿ ನಿರ್ಮಿಸಿದನಿದಕಪ । ವಾದವಿಲ್ಲಿದು ನಿಶ್ಚಯವು ಕರಿ ನಿಂಬ ಕುಚಯುಗೆಯಾ ॥ ಮೋದದಿಂದೊಯ್ಯು ತಲಿ ಮದುವೆಯು । ನಾದೆನೆಂದರೆ ತನ್ನ ಭಾಗ್ಯಕೆ । ಮೇದಿನಿಯೊಳೀಡಿಲ್ಲವೆಂದಾ ಕ್ಷಣದೊಳಾಸತಿಯಾ ॥ ೧॥

ವಾರ್ಧಿಕ್ಯ

ಕದಲದೋಲೆತ್ತಿ ಕೊಂಡ್ಯೊದಾಗ ಮಂಚಮಂ । ಪವಗಿನಿಂ ನಿಶಿಯೊಳಾ ಪುರಗಿರಿಗಳಂ ಕಳೆದು । ಪದುಮ ಸಖನುದಯದೋಳ್ ದಿಂಡೀರವೆಂಬ ವನ ದೆಡೆಗೈದು ಪೋಯನಿಳುಹೀ ॥ ಉದಧಿವಸನೇಶ ಶ್ರಮವನು ಕಳೆಯುಲೋಸ ಗವೆ । ಮುದದಿ ಕುಳಿತಿರಲಿತ್ತ ನಿದ್ದೆ ತಿಳಿನೆದ್ದಾಗ । ಇದು ಭುತವಿದೇನೆಂದು ಬ್ಬಾ ಬಿಡುತ ಮರುಗಿದಳ್ ಕಡು ಭಯವ ತಾಳ್ದು ಸುದತೀ ॥ ೧ ॥

ರಾಗ-ನೀಲಾಂಬರಿ-ಏಕತಾಳ

ಹರ ಹರಾ ಕರುಣಾನಿಧೇ । ಯೇಸಜ್ಜರಿ । ಯರಿಯೆನರುಹಬಾರದೇ ॥ ಪುರಪ ತ್ಯಜಿಸುತಲಿಲ್ಲೀ । ಪಲ್ಲಂಗದೊಡ । ಬರಲೇನಾರಣ್ಯವಲ್ಲೀ ॥ ೧ ॥ ಚೋರರ್ಮಂದಿರವ ಹೊಕ್ಕೀ । ಸುಲಿದು ಎನ್ನಾ । ಘೋರ ಕಾನನದೊಳಿಕ್ಕೀ ॥ ಸೇರಿದರೇನೊ ಹೀಗೇ । ಅಲ್ಲದಡೆನ್ನಾ । ತೀರಿಸಲ್ ನೆನವ ಬಗೇ ॥ ೨ ॥ ಭೂತಗಳೆನ್ನನಿಂತೂ । ಗೈದವೊ ಗಿರಿ । ಜಾತೆಯ ಪತಿಗೆ ಗೊತ್ತು ॥ ಈ ತೆರನೆಸಗುವುದೇ । ಶಿವ ಶಿವ ಎನ್ನಾ ! ಘಾತಿಸದ್ಯೈದುವುದೇ ॥ ೩ ॥ ಈ ಪರಿ ದುಗುಡದಿಂದಾ ನಾಲ್ದೆಸೆಯನು । ತಾಸದಿ ನೋಡಲ್ಲಿಂದಾ ಭೂಪನ ನೀಕ್ಷಿಸು ೨ । ಭಯದಿ ತಾ ಪ್ರ । ಲಾಪಿಸುತೆಂದಳ್ ಮಾತಾ ॥ ೪ ॥

ರಾಗ-ಆನಂದಭೈರವಿ-ಏಗತಾಳ

ಯಾರಯ್ಯ ಮನುಜೇಶಾ ತನ್ನಾ । ಕೂಡಿ । ಕಾರಡವಿಯೊಳು ಸಂಪನ್ನಾ ॥

ಕಾರಣವೇನಿಲ್ಲಿ ಬರಲೂ । ಪೇಳು । ಕಾರುಣ್ಯ ಭಾವವಿನ್ನಿರಲೂ ॥ ೧ ॥ ಎನ್ನನ್ಯಾಕಿಲ್ಲಿ ನೀ ತಂದೇ । ಬೇಗ । ಎನ್ನೊಡಮಸುರೆನ್ನ ತಂದೇ ॥ಮುನ್ನ ಘಾತಿಸಾವರೆ ಮನವಾ । ಗೈದೂ । ಡನ್ನರಿಯೆನು ಪೇಳು ನಿಜವಾ ॥ ೨ ॥ ತರಳೆಯೆನ್ನೊಡಸೇನು ಚಿನ್ನಾ । ರತ್ನಾ । ಭರಣವೇನಿಲ್ಲಾ ಕೇಳಣ್ಣಾ ॥ ಬರಿಸಿ ಕರಗಿಸಲಿನ್ಯಾಕೇ । ಪ್ರೇಮವಿರಿಸುತ ಪೇಳು ಪರಾಕೇ ॥೩॥

ಭಾಮಿನಿ

ಧರಣಿಪತಿ ಲಾಲಿಪುಮ ವಸಿತೆಯು ಸಿರಿಯ ಕರುಮಾಡವನ ಸರದಿಂ ದ್ಧರಧರೆಯ ಮೇಲ್ಬಿಸುಡೆ ಖಗನಿಂ ಕೆಡುವ ವ್ರೋಲ್ತನ್ನಾ ॥ ಪುರವೆನುವ ಕೊಳದಿಂದ ಬಿಡವನು। ಸರಸಿರುವ ವಿಧಿಕಿತ್ತು ವನವೆಂ। ಬುರುತರದ ಶಿಲೆಯೊಳಗೆ ಬಿಸುಟಿಹುದೆನುತ ಮರುಗಿದಳೂ ॥ ೧ ॥

ಕಂದಪದ್ಯ

ಮತ್ತಿನ ದಹಿಸುವ ತನ್ನನೆ। ನುತಾಯತಲೋಚನೆ ಚಿಂತಿಸುವದ ನರಿತು ನ ॥ ರೋತ್ತಮನೊಡನೆಂದ ಮದೋ । ನ್ಮತ್ತದಿ ರತ್ನಾವತಿಯೊಡ ನತಿ ವಿಭವದೊಳಂ ॥ ೧ ॥

ರಾಗ–ಕಲ್ಯಾಣಿ–ಆದಿತಾಳ

ಬೆದರಲ್ಯಾತಕೆ ನಾರೀ । ಮಾರನ್ ಕಠಾರೀ । ಬೆದರಲ್ಯಾತಕೆ ನಾರೀ ॥ ಪಲ್ಲ ॥ ಬೆದರಲ್ಯಾಕೆ ನಾ । ಬದಿಯೊಳಿರಲು ನೀ । ಸದ ಬಿಡು ಮನದಲಿ ಮುದವನುತಳೆದೂ ॥ ಅನುಪಲ್ಲ ॥ ಮದಿರಲೋಚನೆ ನಿನ್ನ ।ಸೊಬಗನೊಮ್ಮೆ ಬುಧರು ಪೇಳಲು ಚಿನ್ನಾ ॥ ಪದುಮಗಂಧಿನಾ । ನಿದಕೋಸುಗ ಕದನದಿ ನೃಪನೊಳು ಕಾ । ದಿದುದೆಲೆ ರಮಣೀ ॥ ೧॥ ಕಲಹದಿ ಗೆಲಿದಿತ್ತಾ । ತಂದಿಹೆ ನಿನ್ನಾ । ಕೊಲುವರಲ್ಲಿದು ಚಿತ್ತಾ ॥ ಬಲುತರದೊಳು ಭ್ರಮೆ । ಗೊಳುತಿದೆ ಯದನನು । ಗೊಳಿಸ್ಯೆ ಬೇಗನೆ ಕಲಶುಕವಾಣೀ ॥ ೨ ॥ ಮಾರನುರುಜೆ ತಣಿಯೆ । ಕೇಳ್ ಗುಣಮಣಿಯೇ । ದಾರಿಯೇನೆನುತರಿಮೇ ॥ ನಾರಿಮಣಿ ನಗೆ । ಬೀರುತ ನುಡಿ ದಯ । ದೋರೆಲೆ ಎನ್ನೊಳು ನೀರೆ ಶೃಂಗಾರೆ ॥ ೩ ॥ ಇಂಗಿತ ಯೆನಗುಸುರೇ । ದಣಿಸುವುದೇಕೆ । ಭೃಂಗಕುಂತಳೆ ಶೂರೆ ॥ ಅಂಗದಿ ಗಿಣಿ ಸಾ । ರಂಗ ನಯನೆ ಲಲಿತಾಂ । ಚಿಂತಿಸುವುದ । ರಂಗವನರಿಯೆನೂ ॥ ೪ ॥

ಅಷ್ಟಭಾಗ್ಯವು ಎನಗೇ । ಇಹುದು ವೇೞಲ್ ವಿ। ಶಿಷ್ಟ ಭೂಪರು ಎನಗೇ ॥ ಥಟ್ಟನೆ ಕಪ್ಪವ । ಕೊಟ್ಟೊಂದಿಸರಿದು । ದಿಟ್ಟವು ನಾ ಮ ನ ಗೊ ಟ್ಟಿ ಹೆ ನಿನಗೇ ॥ ೫ ॥।

ರಾಗ–ತೋಡಿ-ರೂಪಕ ತಾಳ

ಧಾರುಣಿಪಾಲಾನೆಂದುದ ಲಾಲಿಸುತಲಾಗಾ । ನಾರಿಯಿಂತೆಂದಳಾ ನೃಪಗೇ । ಧೀರ ನಿನ್ನಯ ನುಡಿ । ನಿಜವಾದಡೇನ್ ಗೈವೆ । ಕಾರ್ಯ ಸಂಗತಿಯು ಜೇರಿಹುದೂ ॥ ೧ ॥ ಪಿತ ತಾನು ಮೊದಲೇ ವತ್ಸಾಖನಾಗಿಹ ಸರ . ಪತಿ... ನೀ ವರಿಸುವದೆನುತಾ ॥ ಹಿತದಿ ಪೇಳಿರಲಿನ್ನಾ । ತನ ನುಡಿಯುಲ್ಲಂಘಿ । ಸ. ತಲೆಂತು ಸೇರಲ್ಯೆ ನಿನ್ನಾ ॥ ೨ ॥ ಅರಿಯದಾತನು ನೀನೇನಲ್ಲಾ ಸದ್ಧರ್ಮವ । ತೊರೆವು ದಯೋಗ ವೆಂದೆನುತಾ ॥ ಪರ ಹೆಂಗಳಭಿಲಾಷೆ । ನರಕಕ್ಕೊಯ್ದಪುದೆಂದು । ಮರಳಿ ಪೇಳುವುದೇಕ್ಕೆ ನಿನಗೇ ॥ ೩ ॥ ಇದರಿಂದ ಕೇಳು ನೀ ಎ ನ್ನ ನಾ ಶಿ ಸ ಪ ತಿ । ಮುದದಿ ಸೋದರಿಯೆಂದು ಬಗೆದೂ ॥ ಒಪ್ಪಿನೊಳ್ಳೊದೆನ್ನಾ । ಸದನದಿ ಬಿಟ್ಟರಿ ಲೊದಗುವುದೈ ಪುಣ್ಯ ನಿಜವು ॥ ೪ ॥

ರಾಗ-ಬೇಗಡೆ-ತ್ರಿವುಡೆ

ಹೀಗೆ ಪೇಳುವರೇ ಸಖಿ । ಚಂದಿರಮುಖಿ । ಹೀಗೆ ಪೇಳುವರೆ ಸಖೀ ॥ ॥ ಪಲ್ಲ ॥ ಹೀಗೆ ಪೇಳುವದೇಕೆ ಎನ್ನೊಳು । ನಾಗಗಮನೆ ನಿರಂತರದಿ ಸುಖ । ಭೋಗಿಸುತಲನುರಾಗದಿಂದಲಿ । ಭೋಗಿವೇಣಿಯೇ ದಿನವಕಳೆಯದೇ ॥ ಹೀಗೆ ॥ ॥ ಅನುಪಲ್ಲ ॥ ಚಿಕ್ಕಪ್ರಾಯದ ಕೋಮಲೇ । ಮನದಿ ವ್ಯರ್ಥ । ದುಃಖಿಸಲೇಕೆ ಬಾಲೇ ॥ ರುಕ್ಮನೂ ಸೋದರಿಗೆ ಚೈದ್ಯನು ತಕ್ಕನೂ । ಎಂದೆನುತ ವೈವಾಹಕ್ಕನೂ । ಗೈದಿರಲು ದುರುಳನ ಸೊಕ್ಕನೂ । ಮುರಿದ್ಯೊವ ತೆರವಲಿ । ರಕ್ಕಸಾರಿಗೆ ಘಕ್ಕನೋರ್ವನೆ । ಓಕ್ಕಣೆಯ ಬರೆದಿಕ್ಕಲಿಲ್ಲವೆ । ರುಕ್ಮಿಣಿಯು ತಾ ಕಕ್ಕುಲಿತೆ ಯಾ । ತಕ್ಕೆ ನಿನ್ನೊಳು ಸಿಕ್ಕಿಬಿದ್ದಿಹೆ ॥ ೧ ॥ ಮುನ್ನಾ ಶಸ್ತ್ರನ ಸುತನೂ । ಸೌರಿಯ ಸತಿ । ಯನ್ನು ತಾನ್ಯೊದಿಹನೂ ॥ ಇ ನ್ನಿ ದೂ । ಅವಿಚಾರವಲ್ಲವು ಎನ್ನದೂ । ಪರಪುರುಷ ನಾನೆಂದನ್ನುದೂ ॥ ಚೋದಿಗವ ವಚನವು ನಿನ್ನದೂ ಎಂತಿರಲಿ ಬಳಿಕೇ । ನನ್ನ ಯುವತಿ ನೀನೆನ್ನವುದು ಕೇ। ಳಿನ್ನ ಮ ನ ಸಿ ಗೆ

ತೋರಿದಾ ಹುಲು । ಕುನ್ನಿ ವತ್ಸನ ಬಣ್ಣಿಸುವೆ ಯಾ । ಕೆನ್ನೊಳರುಹಲೆ ನನ್ನಿಯಿಂದಲಿ ॥ ೨ ॥

ರಾಗ–ತೋಡಿ–ಏಕತಾಳ

ನುಡಿಯ ಕೇಳುತೊಡನೆ ಸುದತಿ । ನಡುಗಿ ಕೋಪದಿಂದಾ ॥ ಸುಡು ಸುಡಿವನ ಧಡಿಗತನ್ನಾ । ಕೆಡಿಸುವನೆಂದೆನುತಾ ॥ ೧ ॥ ಮರುಳೆ ಕೇಳಿನ್ನರೆಯೊಳ್ನೀರ । ನೆರದರೇನು ಫಲವೂ ॥ ದುರುಳ ನಿನಗೀ ಪರಿಯೊಳಿರೆಯೆ । ಬರುವ್ರದುಂಟೆ ದಯುವೂ ॥ ೨ ॥ ದಶಕಂಠ ರಕ್ಕಸನು ಸೀತೆ । ಗಸುನಿತ್ತಾ ಕೀಚಕನೂ ॥ ಕುಸುಮಾಕ್ಷಿ ಸ್ವೈಳೇಂದ್ರಿಗಾಗಿ । ವ್ರಸುರು ತೊರೆದ ಸೇನೂ ॥ ॥ ೩ ॥ ದಾತ ಸುಕುಲ ಜಾತನೆಂಬೆ । ಮಾತಿದೆಲ್ಲಾ ಸಟೆಯೂ ॥ ಘಾತರಿರುವ ರೀತಿ ನಡವೆ । ಪಾತಕಿ ಕೇಳ್ ದಿಟವೂ ॥ ೪ ॥ ಪರರ ಹೆಂಗಸರೊಳು ಮನಸಾ । ಇರಿಸಿ ಕುಜನರಂತೆ ॥ ನರಕದೊಳಗೆ ಹೊರಳುತಿರುವ । ಘನವೆ ನಿನಗೆ ಭ್ರಾಂತೆ ॥ ೫ ॥

ವಾರ್ಧಿಕ್ಯ

ಸುದತಿ ಇಂತೆನಲಾಗ ಕೋಪಿಸುತ ಭೂಮಿಪಂ । ಹದದ ಕೊಂಗಿಗೆ ಬಲಿಕೊಡುವೆನೀಕೆಯನೆನ್ನು । ತವ ನೆಗೆಯೆ । ಬಳಿಕಲಶರೀರ ನುಡಿಯನ್ನಾತು ಹೆಂಗೊಲೆಯನೆಸಗದಿರೆನ್ನುತಾ । ಇದನರಿಯುತಚ್ಚರಿಯಗೊಳುತಾಗ ಧಾರುಣಿಪ । ನಧಿಕ ಚಿಂತೆಯೊಳಿರಲ್ಕತ್ತಲಾ ಕಾನನದೊ । ಳಮುಘತಾ ಘಟಿಗೊಟ್ಟು ವನವ ಸಂಚರಿಸಲ್ಕೆ ಪೊರಟ ವಿದ್ಯುಲ್ಲೋಚನಾ ॥ ೧ ॥

ಕಂದಪದ್ಯ

ಚರಿಸುತ ಕಾನನವನು ಸಿರಿ । ಚರನಿರ್ದೆಡೆಗತಿ ಹರುಷದಿ ಬಂದೀಕ್ಷಿಸಿ ಹರಿದವರಂ ತಿಂಬುವೆನೆನು । ತ್ತರಿನಾದದೊಳಿಂತೆಂದನು ಘಟಕಸುತಾಗಂ ॥ ೧ ॥

ರಾಗ-ಮಾರವಿ-ಅಷ್ಟತಾಳ

ಆರೆಲೋ ಮನುಜಾ । ಬಂದಿರುವವ । ನ್ಯಾರೆಲೋ ಮನಜಾ ॥ ಪಲ್ಲ ॥

ಆರೋಸುಮ್ಮನೆ ಹುಲಿಯ ತುತ್ತಿಗೆ । ಹಾರಿ ಬಂದಿಹ ಕುರಿಯ ತೆರದಲಿ । ನಾರಿಯನು ಒಡಗೊಂಡು ಯಮನೆಡೆ । ಸೇರುವರೆ ಸರಿಯಾಗಿ ಬಂದವ । ನ್ಯಾರೆಲೋ ಮನುಜಾ ॥ ಅನುಪಲ್ಲ ॥ ಮನುಜರ ಮಾಂಸವ ಮೇಲದೇ । ಬಲು। ದಿನವಾಯ್ತು ನಾನಿಲ್ಲಿ ಬರದೇ ॥ ಮನಕೆ ತೋಷವದ್ದ್ಯಾತು ಬಲು ಪರಿ ಕ್ಷಣಕೆಹಿಡಿತಂದೀಕೆಯನು ನಾನ್ । ಮನೆಗೆ ಕೊಂಡ್ಯೊದಿಡುವೆ ಕ್ಷೊಬ್ಬಿಸಿ । ಘನದಿ ಭೋಗವ ಗೈವೆನಂತರಾ ॥ ೧ ॥ ಅಲ್ಲದಿರಲು ಲಗ್ನಗೈದೂ । ಸುಖ ಲ್ಲಿ ಮನೆಯೊಳಿಟ್ಟು ನಲಿದೂ ॥ ವಲ್ಲಭೆಯ ತಾ ಮಾಡಿಕೋಳುವೆನ । ಮೆಲ್ಲಲೆಂತೀಯಧಮನಿರುತಿಹ । ಚಲ್ವಪಾಕವನೆಸುಗುವೆನು ತೊಡು ' ನಿಲ್ಲದಿ ವನನು ಕೊಲ್ಲದೀಕ್ಷಣಾ ॥ ೨ ॥

ಭಾಮಿನಿ

ನಿಶಿಚರನು ಹೀಗೆನಲು ಕೇಳ್ದಾ । ಶಶಿಮುಖಿಯು ಭಯಗೊಂಡಿರಲು ಬಳಿ । ಕಸನು ಸಾಹಸಿ ಸಾಯಕಂಗಳ ಧರಿಸಿ ಪೊರಟಾಗಾ ಉಸುರಿ ದನು ಇನ್ಯಾಕೆ ಘರ್ಜಿಪೆ । ನುಸಿಯೆ ಗರ್ವವ ನಿಲಿಪೆನೆನುತಲಿ । ಮುಸೆದ ಬಾಣವ ಬಿಡಲು ಖಳನಿಂತೆಂಪ ರೋಷದಲೀ ॥ ೧ ॥

ರಾಗ–ಮಾರವಿ–ಏಕತಾಳ

ನರಗುರಿ ಕೇಳೆಲೊ । ಬರಿದ್ಯಾತಕೆ ಶರ । ಸರಿಮಾಡುವೆ ಮರುಳೆ ॥ ಧುರದೊಳು ಎನ್ನಲಿ । ಸರಿ ನಿಲ್ಲುವರೀ । ಧರಣಿಯೊಳ್ಯಾರು ಸುರೂ ॥ ೧ ॥ ಖೂಳ ಖಳಾಧಮ । ತಾಳೆಲೊ ನಿನ್ನ । ಸೀಳುತರುಧಿರದೊಳೂ ॥ ಕಾಳಿ ಯನೋಕುಳಿ । ಕೇಳಿಪಡುಸುರುವೆ । ಮೂಳನೆ ಬ್ಯಾಮುಚ್ಛ್ಯೊ ॥ ೨ ॥ ಖುಲ್ಲ ಮನುಜ ಬರಿ । ಝಲ್ಲಿನೊಳೇನ್ ಫಲ । ನಿಲ್ಲದೆ ಹಿಡಿದೀಗಾ ॥ ಚಲ್ಲ ಬಡಿಮ ಬ್ಯಾ । ಪಲ್ಲಿಗೆ ತಗಲದೆ । ಮೆಲ್ಲುವೆ ನೋಡೆಂದಾ ॥ ೩ ॥ ಗಿರಿಗಪ್ಪುರದೊಳು । ನರಿಪಂದಿಗಳನು । ತಿರಿದಟ್ಟುತ ತಿಂದಾ ॥ ಉರವನು ಹೂಡದೀ । ಧರ ಯೊಳು ಕೆಡಹುವೆ । ಖಳ ಕೇಳ್ ಖರೆಯೆಂದೂ ॥ ೪ ॥ ಹೊಸಮುಸಿತಿಹ ಕಣೆ । ಏಸರದಿ ರಕ್ಕಸ ನಸು ಕುಸಿಯುವೆನೆನುತಾ ॥ ಎಸೆಯಲು

ನೋಡುತ । ನಿಶಿಚರನದನು । ತುಸಗಣಿಸದೆ ಮುರಿದೂ ॥ ೫ ॥ ರೌದ್ರ ದೊಳಿವನನು । ಛಿದ್ರಿಪೆನೆನುತಲಿ । ಅದ್ರಿಕುಜವ ಮುರಿದೂ ॥ ಭದ್ರನ ಶಿರಕಾ । ಕ್ಷುದ್ರನು ಹೊಡೆಯಲು । ಬಿದ್ದನು ರಣತಳದೀ ॥ ೬ ॥

ಭಾಮಿನಿ

ಧರಣಿಪತಿ ಕಾಮಿನಿಯು ಹಂಬಲ । ತೊರೆದು ಯಮುನೆಡೆ ಗೈದನಿ ತ್ತ್ರಲು । ಭರಿತಕೋಪದಿ ಕರ್ಬುರನು ಸತಿಯೆಡೆಗೆ ನಡೆತರಲೂ ॥ ಅರಿತ ಪನು ನೃಪಸುತೆಯು ಮನದೊಳು । ಮರುಗಿದಳು ಖಗರಾಜನಟ್ಟುಳಿ । ತೊರೆದು ನಕುಲೇಶ್ವರಗೆ ಸಿಕ್ಕಿದ ನಾಗನೋಲ್ಪಾಂತೇ ॥ ೧ ॥

ರಾಗ–ಆನಂದಭೈರವಿ–ಏಕತಾಳ

ಅಕ್ಕಟಕ್ಕಟೈಯ್ಯೋ ಮೃಡನೇ । ರಕ್ಕಸ ಮುಂದ್ಬರಿವ ತಾನೇ ॥ ಕೊಲ್ಲಲೂ । ತನ್ನಾ ಮೆಲ್ಲಲೂ ॥ ೧ ॥ ಪೊಡವಿಪ ದೃಢವರ್ಮಸೆನ್ನಾ । ಪಡೆದ ಪಿತ ತಾನಾದಡೆನ್ನಾ ॥ ಬರಹವೇ । ಯೆಂತು । ಮೀರುವೇ ॥ ೨ ॥ ಯಾತಕಾಗಿ ವತ್ಸನಿಂಗೆ । ಮಾತು ಕೊಟ್ಟು ಭದ್ರಸಿಂಗೇ ॥ ಜನದನೂ । ಪಿತನೂ । ವರಪನೂ ॥ ೩ ॥ ಯಾತಕಾಗಿ ಕಾವಲ್ಬಂದಾ । ಯಾತಕಾಗಿ ತನ್ನಾ ತಂದಾ ॥ ಸಿಲಿಗೇ । ಭೂಪ । ಮೆಲಗೇ ॥ ೪ ॥ ಬಳಿಕ್ಯಾಕೆ ರಕ್ಕಸ ತಾನಿಲ್ಲಿ । ಕಲಹಕೆನುತ ಜನಪನಲ್ಲಿ ॥ ಬರುವರೇ । ಕೊಂದೂ । ಕಳವರೇ ॥ ೫ ॥ ಭೂಪ ತನ್ನಾಗಳವ ಕಡಿಯೇ । ಕೋಪದಿಂದ ಖಡುಗ ನೆರೆಯೇ ॥ ತಡೆವುದೇ । ಸುರರು । ನುಡಿವುದೇ ॥ ೬ ॥ ಮುಮಳನೆನ್ನಾನ್ಯೊಮು ಕೆಡಿಪ । ದಿಲಾರಸ್ಯೆಯ್ಯೊ ಕೆಲಸ ॥ ಕೆಡುವುದೂ । ಯೇನಾ । ನುಡಿವುದೂ ॥ ೭ ॥ ಮತ್ತೆ ಕೊಲುವನೇನೋ ಎನ್ನಾ । ಚಿತ್ರಜಾರಿ ಬಲ್ಲಾ ಮುನ್ನಾ ॥ ಬಿಡುವನೇ । ಆಳ । ದಿರುವನೇ ॥ ೮ ॥

ವಾರ್ಧಿಕ್ಯ

ಜಯ ಜಯ ಜಗನ್ನಾಥ ಜಾನಕೀ ಸುಪ್ರೀತ । ಜಯ ಜಯ ಚಿದಾ ನಂದ ವಂದ್ಯ ಸುಮನಸ ವೃಂದ । ಜಯ ರುಕ್ಮಿಣೀ ರಮಣ ಜಯ ಕೌಸ್ತುಭಾ

ಭರಣ ಜಯ ಖಳಸ್ತೋಮ ಭೀಮಾ ॥ ಭಯ ದೂರ ನೀ ಎನ್ನ ಭವ ಣೆಯನು ಪರಿಹರಿಸು | ದಯದೋರು ಕರುಣವಾರಿಧಿ ತನ್ನ ಬಿಡದೆ ಚಿನ್ । ಮಯ ಮೂರ್ತಿ ಕಾಯುತೀ ಖಳನಬಾಧೆಯ ಬಿಡಿಸು ಪದುಮನಾಭನೆ ದಯದೊಳೂ ॥ ೧ ॥

ಭಾಮಿನಿ

ವಾರಿಜಾಕ್ಷನೆ ದ್ರೌಪದಿಯ ನೀ । ಭೂರಿ ಕರುಣದಿ ಕ್ಯಾದೆ ಸುಮನಸ । ವಾರವನು ಸಲಹಿರುವೆ ದಶಕಂ ಠನನು ಕಳೆದೀಗಾ ॥ ನಾರಿಯೊಬ್ಬಳ ಸಲಹುವುದು ಬಲು । ಭಾರವೇ ಗೋವಿಂದನಿನಿತಿರೆ । ಮಾರಪಿತ ಬಿಡದೀಗ ಪ್ರಾಣವ ಕಾಯೊ ಮುರಹರನೇ ॥ ೧ ॥

ರಾಗ-ಶಂಕರಾಭರಣ-ತ್ರಿವುಡೆತಾಳ

ಸುದತಿ ಈ ತೆರದಿಂದ ಚಿಂತಿಸಿ । ಮಧು ರಿಪುವ ನೆನೆಯುತ್ತಿರೇ ॥ ಇದಿರು ಬಂದಾದುರುಳ ರಕ್ಕಸ । ವಿಧುಮುಖಿಯೊಳಿಂತೆಂದನೂ । ತೋಷ ದಿಂದಾ ॥ ೧ ॥ ಕೋಮಲಾಂಗಿಯೆ ನಿನ್ನ ಪೆತ್ತಿರು । ವಾಮಹಿಮನ್ಯಾರೆ ನ್ನುತಾ ॥ ಪ್ರೇಮದಿಂದಲಿ ಪೇಳು ಮದಗಜ । ಗಾಮಿನಿಯೆ ಬಿಡು ಚಿಂತೆಯಾ । ಎನ್ನೊಳೀಗಾ ॥ ೨ ॥ ಇತ್ತ ಕೇಳ್ ಹರಿಣಾಕ್ಷಿ ಎನ್ನನು । ಚಿತ್ತಜನು ಬಲು ತೆರದೊಳೂ ॥ ವ್ಯರ್ಥ ಬಳಲಿಪನಿದಕೆ ಶಮನವ । ಬಿತ್ತರಿಸು ನೀ ಎನ್ನೊಳೂ । ಕರುಣದಿಂದಾ ॥ ೩ ॥ ತನು ಸುಖವ ಪಡೆಯಲ್ಕೆ ನಿನ್ನಲಿ । ಮನವ ಮಾಡಿ ಮುದಲ್ಲದೇ ॥ ಕೊಲುವದಿಚ್ಛಿಪುದಲ್ಲ ನಾರೀ । ಮಣಿಯೆ ಭಯವನು ತೊರೆ ಯುತಾ । ಮೊಗವ ನೆಗಹೂ ॥ ೪ ॥ ಬಳಿಯೊಳಿಹ ಮನುಜಾಧಮನು ತಾ । ನೆಲವ ತೊರೆಯುತಲೆನುನೆಡೇ ॥ ನಲವಿನಿಂದಲಿ ಪೋಗಿಹನು ತಿಳಿ । ತಿಲಕ ಪುಷ್ಪ ಸುನಾಸಿಕೇ । ಪುಸಿಯಿದಲ್ಲಾ ॥ ೫ ॥ ಧಡಿಗನಿಂತೆನೆ ಕೇಳುತೆಲ್ಲವ । ಜಲಜಲೋಚನೆ ಮುಗುಡವೀ ॥ ಅಡಗಿಸಿದಾಪತ್ತಿನಲಿ ಧೈರ್ಯವ । ಬಿಡದೆ ಪೇಳ್ದಳು ರೋಷದೀ । ದಾನವನೊಳೂ ॥ ೬ ॥

ರಾಗ-ಕಾಫಿ-ಝಂಪೆತಾಳ

ದುರುಳ ರಕ್ಕಸ ಕೇಳು । ವರೆಯುಲ್ಯಾಕಿಂತೆನಗೆ । ಜೊರೆಯುವುದೆ

ಲಾಭವೇನ್ ಹೀಗೇ ॥ ಪರಿ ಪರಿಯ ನರಕದೊಳು । ಹೊರಳುವುದು ಹಿತ ಕರವೆ । ನರವೈರಿಯುಸುರು ಎನ್ನೊಡನೇ ॥ ೧ ॥ ಹೆಣ್ಣಿನಾಶೆಯೊಳು ನಿ ॥ ಷ್ಣಣ್ಣ ರಾವಣ ಮಡಿದು । ಮಣ್ಣಿನ್ನೊಂದಿಕೆಯಾದ ಬಳಿಕಾ ॥ ಭಿಣ್ಣನಾ ದ್ರೌಪದಿಗೆ । ಕಣ್ಣಿಟ್ಟು ಕೀಚಕನು । ತನ್ನಸುವ ತೊರೆದನೇನೆನಲೀ ॥ ೨ ॥ ವಾಲಿ ರುಮೆಯನು ಮನೆಗೆ । ಲೀಲೆಯಿಂದ್ಯೊದುತಲಿ । ಕಾಲನೆಡೆಗೈದುವನು ಮರತೇ ॥ ಕೀಳುತನ ಗೈದು ಸುರ । ಪಾಲ ಗೌತಮನಿಂದ । ಹಾಳಾವ ಬಗೆ ಯೋಚಿಸೀಗಾ ॥ ೪ ॥ ತೊರೆದಿರುವ ಪ್ರಾಣವೀ । ದರಿಯಧಿಪ ಎನ್ನ ಕ । ದ್ದಿರದಿಲ್ಲಿ ತಂದಕಾರಣದೀ ॥ ಬರುವುದಿನ್ನವನ ಗತಿ । ಸೆರಗಿನೊಳು ಗಂಟಿಕ್ಕು । ಬರಿದೇಕೆ ಕೆಡುವೆ ಎನಲೊರೆದಾ ॥ ೫ ॥

ರಾಗ–ಕೇತಾರಗೌಳ–ಅಷ್ಟತಾಳ

ಯಾಕೆನ್ನ ನುಡಿಯ ನಿರಾಕರಿಸುವೆ ಪೇಳು । ರಾಕೇಂದು ವದನೆ ಹೀಗೇ ॥ ಜೋಕೆಯೊಳುಸುರೆಲ್ಲ । ಡೀ ಕಾನನದಿ ಪ್ರಾಣ । ನೀ ಕಳ ಕೊಳುವೆ ನೋಡೂ ॥ ೧ ॥ ಜನಿಸಿದವನು ಸಾಯ । ಲಿನಿತೆಂಬ ನೇಮದ । ವನಜ ಸಂಭವ ನೇಮಿಸೇ ॥ ತನಗೆಂತು ಬಿಡುವುದು । ವನದನ್ಯೆವೆಂದೆಂಬು । ವನು ವೃತ್ತ್ಯ ತಾ ಕಾಂಬಳೇ ॥ ೨ ॥ ಸುರನಾರಿಯುನು ಕೂಟ । ಪರ ಪುರುಷನನಿಚ್ಛಿ । ಪರು ಕೇಳು ನಾಗವೇಣೀ ॥ ಕರವೆ ನಿನಗೆ ಎನ್ನೊ । ಳಿರುವುದೆ ಕುಂದುಗ । ಳಿರುಹು ಬೇಗದನು ಜಾಣೇ ॥ ೩ ॥ ದಾನವ ಕೇಳು ನೀ । ಪ್ರಾಣವ ಕಳೆದರೂ ನಾ ನಿನ್ನ ಸೇರಲುಂಟೇ ॥ ಹೀನ ರಕ್ಕಸ ನಿನ್ನ । ತಾಕೆ ನೆನ್ನುತ ಮೊಗ ಮಾನಿನಿ ತಿರುಹಿದಳೂ ॥ ೪ ॥

ಭಾಮಿನಿ

ನಾರಿ ಮೊಗದವು ತಿರುಹಿ ನೋಡುತ । ಘೋರ ವಿದ್ಯುಲ್ಲೋಚನನು ತಾ । ಭಾರಿ ಕೋಪವ ತಾಳುತುರಿದನದಳೊಡನೆ ಭರದೀ ॥ ವಾರ ವೆರಡಿತ್ತಿಹೆನು ಮನದಿವಿ । ಚಾರಿಸುತ ನೀ ಪಿಡ್ನಗೈವುದು । ವಿಾರಿದಡೆ ಕಡೆಗಾಲ ತೋರುವೆ ನೆನುತ ಓಡಿದಾಗಾ ॥ ೧ ॥

ಕಂದಪದ್ಯ

ಅರಮನೆಗೊಯ್ಯುತ ಸತಿಯನು । ಪೊರಮಡದೋಲ್ ಬಂಧಸೆಯೊಳಗಡುತಾ ಕರ್ಬುರ ॥ ಸಿರಲಿತ್ತಾ ವನಿತೆಯು ಬಲು । ಪರಿ ದುಃಖಿಸಿದಳ್ ಘಾತಿಪನೆನುತಂ ॥ ೧ ॥

ರಾಗ-ಸೌರಾಷ್ಟ್ರ-ತ್ರಿವುಡೆ

ಇನಿತು ಕಾಮಿನಿ ದುರುಳನೆಡೆಯೊಳು । ದಿನವ ಯುಗದೋಲ್ಕಳೆಯುತಿರಲಾ । ವನಿತೆ ಸುಖಿಸುವ ಕಾಲ ಬಂದುದು । ಜನಪ ಕೇಳೂ ॥ ೧ ॥ ಒಂದು ದಿನ ಕೌಶಂಬಿ ಧರಣಿಪ । ನೆಂದೆನುವ ವತ್ಸಾಖ್ಯ ಸಂತಸ । ದಿಂದ ಮಂತ್ರಿಯ ಕರೆದು ಮತ್ತವ । ನೆಂದನಿನಿತೂ ॥ ೨ ॥ ಬೇಟೆಯಾಡದೆ ಬಹಳ ದಿನಗಳು । ದಾಟಿದವು ಇದಕಾಗಿ ಶಬರರ । ಕೂಟವನು ಬರ ಹೇಳು ತನ್ನಯ । ಘೋಟಕವನೂ ॥ ೩ ॥ ತರಲುಸುರೆ ಇಂತೆನಲು ಕೇಳ್ದಾ । ವರ ಸಚಿವನಾಕ್ಷಣದಿ ಕರೆಸಲು । ಪೊರಟ ಜನ ಸಂದಣಿಯಕೂಡುತ । ಧರಣಿಪಾಲ ॥ ೪ ॥

ರಾಗ-ತುಜಾವಂತು-ಏಕತಾಳ

ಬಂದಾ ವತ್ಸಾಖ್ಯ ಬೇಟೆಗೆಂದೂ । ಸಂತೋಷದಿಂದಾ । ಬಂದಾ ॥ ಪಲ್ಲ ॥ ಬಂದನಾಗ ಬಹು । ಮಂದಿಯ ಕೂಡುತ । ಚಂದದಿ ನರಪತಿ । ನಂದನ ಕಂಡೂ ॥ ಅನುಪಲ್ಲ ॥ ಹಿಡಿ ಹಿಡಿ ಕಡಿ ಹೊಡಿ । ಜಡಿ ಬಡಿ ತಡಿಯೆನು । ತೊಡನಾ ಬೇಡರ । ಪಡೆಯಾನು ನೆರಹೀ ॥ ೧ ॥ ಪದುಮಾಕರವನು । ಕದಡಿದ ಮದ ಗಜ । ವಿದು ನೆಲತರಿದೀ । ದಿದೊಯೆಂದೊದರೀ ॥ ॥ ೨ ॥ ಕಲವಂಕಳಿಗೆ । ಕಲಕಂಠವುಕೋ । ಕಿಲ ಕುಲ ಕುಕಿಲವ । ಬಲಿಯಲಿ ಕೆಡಹುತಾ । ಬಂದಾ ॥ ೩ ॥

ವಾರ್ಧಿಕ್ಯ

ಈ ಪರಿಯೊಳಖಿಳ ಖಗ ಮೃಗ ಸಂಕುಲವ ಕೊಲುತ । ಘೂಕವೃಂದೊತ್ತಿಬರಲೊಂದೆರಳೆ ತನ್ನಸುವ । ಕಾಪಾಡಲೋಡಿದುದು ಬಹುದೂರವಿದ ಕಂಡು ವತ್ಸಬೆಂಬೊತ್ತುತೈದೀ ॥ ಆ ಪಗೆಯ ದಾಂಟಿ ಗಿರಿ

ವರ್ಗಗಳ ಕಳೆದಿನನ । ತಾಪದಿಂ ಬಲುಬಳಲಿ ಬಾಯಾರಿ ನೆಳಲಿಸೋಲು। ತಾಪವನು ಕಳೆಯಲ್ಕೆ ವಾಜಿಯಂ ತ್ಯಜಿಸಿ ಕುಳ್ಳಿರ್ದನಾಲ್ದೆಸೆ ನೋಡುತಾ ॥ ೧ ॥

ಭಾಮಿನಿ

ಕಾಡ ವಿಭವಕೆ ಮೆಚ್ಚಿ ಮನದೊಳ ; ಗಾಡಿದನು ಪಿಂತೀ ವಿಪಿನ ವನು । ನೋಡಲಿಲ್ಲವು ಪೊಸತೆನುತ ಮತ್ತಿರಗೆ ಕಾಣುತಿರೇ ॥ ಜೋಡಿರದ ಮನೆಯೊಂದು ಕಾಣಿಸೆ । ರೂಢಿಪನು ಮಿಗಿಲಚ್ಚರಿಯೊಳಾ । ಕೂಡೆ ಮಂದಿರ ದೆಡೆಗೆ ತೆರಳುತಲೆಂಪನೀ ತೆರದೀ ॥ ೧ ॥

ರಾಗ-ಕಾಫಿ-ಅಷ್ಟತಾಳ

ಏನ ಪೇಳುವೆನೀ ಸೋಜಿಗವಾ । ಇದ । ತಾನೆ ಕಟ್ಟಿಹುದ್ಯಾರೋ ತಿಳಿಯೆತಾನಿಜವಾ ॥ ಏನ ॥ ಪಲ್ಲ ॥ ಬಣ್ಣಿಸಲೇನೀ ಮಂದಿರವಾ । ಬಿಡು । ಗಣ್ಣರ ಮನೆಗಿಂತ ಸೊಬಗಿನೋಳ್ ಮೆರೆವಾ ॥ ಬಣ್ಣದುಪ್ಪರಿಗೆಯ್ಯೋಭವವಾ । ನೋಡಿ! ತಣ್ಣಗಾಯಿತು ತೃಷೆ ಪೇಳಲೇನಿರವಾ ॥ ೧ ॥ ಅರರೆ ಯೇನಚ್ಚರಿ ಭಯದೀ । ಪೋಡಿ ದೆರಲೆಬಂದಿಲ್ಯೆನ್ನ ಕಾಬುವ ತೆರದೀ ಹೊರ ನೋಟದಕ್ಷಿಗಳೆನಗೇ । ತೋರ್ಪ । ವರಿಯ । ಬೇಕೆನುತೆಂಬು ಭೂಮಿಪ ತಿರುಗೇ ॥ ೨ ॥ ಅಂಗನೆಯೆನುತ ನಿಶ್ಚಯಿಸೀ । ತಾಕಾ । ಳಿಂಗ ವೇಣಿಯ ಬಳಿಗಾಗಿ ಮುಂದ್ವರಿಸಿ ॥ ಅಂಗಣವನು ಪೊಕ್ಕು ನೋಡೀ । ನೃಪ । ಪುಂಗವ ಮಾನದೊಳಗಿನಿತು ಮಾತಾಡೀ ॥ ೪ ॥

ರಾಗ-ಹಿಂದುಸ್ಥಾನಿಕಾಫಿ-ರೂಪಕ

ಸರಿಯಾರಿ ತರುಣಿಮಣಿಗೇ । ವರೆಯಲೇ ನಿನ್ನಿವಳ ಬಗೇ ॥ ಗುರು ಕುಚಯುಗೆ ಚಂದ್ರಮುಖೀ । ಉರಗವೇಣಿ ಮದನ ಸಖೀ ॥ ಪಲ್ಲ ॥ ಭ್ರಮರಕುಂತಳೆ ಕಮಲನೇತ್ರೇ । ಅಮಿತಶೋಭೆ ವಿಮಲಗಾತ್ರೇ ॥ ದ್ಯುಮಣಿಯಂತೇ ತೇಜದಿಂದಾ । ಗಮಿಸುವಳಲ್ಯೇನು ಚಂದಾ ॥ ೧ ॥ ದಾಪೊಡೆಯನೊ ದಾರ್ಪೆತ್ತನೊ । ಸೀರೆ ಇವಳ ಸೊಬಗಿದೇನೋ ॥ ಪೂರ್ವ ಪುಣ್ಯ ವಶದಿ ತನಗೆ । ತೋರಿತಲ್ಲದೆಂತು ಹೀಗೇ ॥ ೨ ॥ ಕರಿ ಗಮನೆಯು

ಹೊರಗೆ ನೋಳ್ಪ || ಆರಿಯನೆಲ್ರೋ ಬಾರದೀಪರ್ ಸರಿ ಯಿಮನೋಡು ವೆನೆನುತಾ । ಪೊಡಟಾಕ್ಷಣ ಭೂಮಿಪತಾ ॥ ೩ ||

ಭಾಮಿನಿ

ಮನೆಯೊಡೆಯರ್ಯಾರಿಲ್ಲ ಚಂದ್ರಾ । ನನೆಯು ಮಾತ್ರವೆ ಇರುವ ಶಿರ ದಲಿ । ತನ್ನ ತೋರ್ಪುದು ಯೆಂತದಾಗಲಿ ಪರಿಕಿಸುವುದೆನುತಾ || ಜನಪ ನುಪ್ಪರಿಗೆಯನು ಸೇರ್ದ । ಕನಕಪುತ್ಥಳಿಯಂತೆ ರಂಜಿಪ । ವನಜಲೋಚ ನೆಯಳನು ಕಂಡಾ ನೃಪತಿಯುಸುರಿದನೂ ॥ ೧ ||

ರಾಗ-ಮುಖಾರಿ-ಏಕತಾಳ

ನೀರೆ ಸುಗುಣೆ ದಯದೋರುತ ಪೇಳ್ ನೀ ನಾರೆನುತಲಿ ಚದುರೇ । ನೀರಜಾಕ್ಷಿ ಮದ ವಾರಣ ನಡೆ ನಗೆ । ಬಿರುತ ನುಡಿ ಧೀರೇ ॥ ಪಲ್ಲ ।। ಮಾನಿನಿ ನಿನ್ನಯ ಪಿತನ್ಯಾರೆನ್ನುತ । ನೀನೊರೆ ಯೆಲೆ ಜಾಣೇ ।। ಕಾನನದೊ ಳಗೋರ್ವಳೆ ನೀನಿರುತಿಹೆ | ಯೇನೆನುತಲಿ ಕಾಣೆ || ೧ || ಮನದೋಳ್ ಚಿಂತಾಲತೆಯದು ಹಂಬುತ । ಮೊನೆಗೊಂಡಿಹುದೇನೂ || ಕನಕಾಂಗಿಯೆ ಮತ್ತದು ತವ ಮೊಗದೊಳು । ಮಿನುಗುವ ಬಗೆಯೇನೂ || ೨ || ಚಂಚಲಾಕ್ಷಿ ಬಲು ಮಿಂಚುವ ಕದಪದು | ಕೊಂಚ ಕಂದಿಹುದೇನೂ || ಪಂಚಶ ಗ್ಯೆಯದಲುಸುರೆನ್ನೊಡ ನರ । ಸಂಚಿಗಮನೆ ನೀನೂ ॥ ೩ ॥ ಬೆದರಲೇಕೆ ನಾ ವಂಚಕನೆನ್ನುತ । ಪದುಮನೇತ್ರೆ ಹೀಗೇ ।। ವಿದುಧರನಾಣೆಯು ಕುಹಕಿಗನಲ್ಲವು । ಮುದದೋಳಗರುಹೆನಗೇ || ೪ ॥

ಕಂದಪದ್ಯ

ಕೇಳ್ದಾ ಸುದತಿಯು ಲಜ್ಜೆಯ । ತಾಳುತ ಶಿರ ತಗ್ಗಿಸಿದುದ ತಿಳಿವಾ ಧಾರುಣಿ ॥ ಪಾಲನು ಮತ್ತಿಂದೆಂದನು । ಲೋಲಾಂಬಕಿಯುಸುರ್ವಾವನು ತವ ಪತಿಯೆನುತಂ || ೧ ||

ರಾಗ–ಬೇಗಡೆ-ಏಕತಾಳ

ನುಡಿಯೇ । ನಿನ್ನೊಡೆಯನ ಪೆಸರೊಡ | ನುಡಿಯೇ || ಪಲ್ಲ || ಬಡ

ನಡುವಿನಜಡ । ಪಿಡಿ ನಡೆದಾಡ ಕೊಡ । ಬಿಡು ಕಡು ಬೇಡಗಿನೋ । ಉಡು ಪಡೆ ಪತಿ ಮುಖಿ ॥ ನುಡಿಯೇ ॥ ೧ ॥ ನಗೆ ಮೊಗ ನೆಗಹುತ । ಲೊಗುಮಿಗೆ ದುಗುಡಗ । ಉಗಿ ಮೃಗಧೃಗು ಯುಗೆ । ಜಗೆ ಮಿಗೆ ಸುಗ್ಗುಣೇ ॥ ೨ ॥ ವನಜಾಕ್ಷಿನೆ ತನು । ವನು ನನೆ ವೊನೆಯುನು । ಕುನಿಸ್ಪನು ಮನವಿನಿ । ತೆನು ಘನತನನೊಳು ॥ ನುಡಿಯೇ ॥ ೩ ॥

ಭಾಮಿನಿ

ನಳಿನನೇತ್ರೆಯು ತಲೆಯನೆತ್ತುತ । ಬಳಿಕ ನಾಚುತ್ತಿರಲು ತಿಳಿದಾ । ಇಳೆಯಧಿಪನಿಂತೆಂದ ಕೋಮಲೆ ಯೊಡನೆ ತೋಷದಲೀ ॥ ಅಳುಕದಿರು ಕೇಳಬಲೆ ನಾವೇನ್ । ಕುಲಗೆಡುಕರಲ್ಯಾಕೆ ಯೋಚಿಪೆ । ಘಳಿಲನೊರೆಯೆನೆ ಸುದತಿ ವಿಸ್ತರಿಸಿದಳು ತನ್ನಿರವಾ ॥ ೧ ॥

ರಾಗ–ಸಾಂಗತ್ಯ–ರೂಪಕತಾಳ

ಯಾರಯ್ಯಾ ತನ್ನೊಡ । ನೀ ರೀತಿಯೊಳು ಕೇಳ್ವ । ಕಾರಣವೇನೂ ನಾನರಿಯೇ ॥ ನಾರೀ ತನ್ನವನು ವಿ। ಚಾರಿಸಿ ಫಲವೇನೊ । ಭಾರಿ ದುಷ್ಕರ್ಮಿತಾನಹೆನೂ ॥ ೧ ॥ ಧರೆಯೊಳತ್ಯಧಿಕವಾ । ಗಿರುವಂಗ ಪಟ್ಟಣ । ದೊರೆ ದೃಢವರ್ಮನ ಸುತೆಯೂ ॥ ಸಿರಿವಂತ ವತ್ಸನಿಂ । ಗಿರದೆನ್ನಾ ಮದುವೆಯಾ । ವಿರಚಿಸೆ ಪಿತ ನಿರ್ಣಯಿಸಿದಾ ॥ ೨ ॥ ಅಂದರೇನ್ ಗೈವುದು । ಪೊಂದಿಸಾ ವಿಧಿ ಎನ್ನ । ನೆಂದಿಗೂ ಬಿಡುವ ಮಾತುಂಟೇ ॥ ಬಂದೋರ್ವ ಭೂಪ ತಾ ತಂದೆಯ ಸೋಲಿಸಿ । ತಂದಾ ಕಚ್ಚೆನ್ನನೀ ವನಕೇ ॥ ೩ ॥ ಬಳಿ ಕೋರ್ವ ರಕ್ಕಸ । ಕಲಹವಿ ಜನಪನಾ । ಕೊಲುತೆನ್ನಾ ಕೆಡಿಸಲೆಂದೆನುತಾ ॥ ಹಲವಂಗ ಯತ್ನಿಸೆ । ಫಲ ಸಿಗದಿರೆ ಮತ್ತೀ । ನಿಳೆಯದಿ ತಂದೂ ಬಂಧಿಸಿಹಾ ॥ ೪ ॥ ಜೀವಗೊಳ್ಳುವ ತನ್ನಾ । ಕಾಯ್ದಿರಿನ್ನಾರಿಹರ್ । ಹಾ ವಿಧಿಯನು ಮೀರಲೆಂತೂ ॥ ಭೂವರ ವತ್ಸನಿಂ । ನ್ಯಾವನೆಲ್ಲಿಹನಿವ । ನೀವರಿವಿರೆ ದಯ ಮಾಡೀ ॥ ೫ ॥ ಧರಣಿಪ ವತ್ಸನ ನುರಿಯೊಳಿರದೆ ಬ್ಯಾರೆ । ಕುರಿಗಳನಿಚ್ಛೈಸು ದುಂಟೇ ॥ ಹರಣವ ತೆಗೆದರೀ । ದುರುಳನ ಸೇರುತ । ಲಿರಲುಂಟೆ ಜಗದಿ ಬಾಳುತಲೀ ॥ ೬ ॥

ವಾರ್ಧಿಕ್ಯ

ಮತ್ತೆ ಕೇಳ್ ಸುರವೈರಿ ವನಕೆ ತೆರಳಿಹನವನು । ಗೊತ್ತು ಬರುವನು ನಮ್ಮ ಕಂಡು ಕೊಲ್ಲದಡವಗೆ| ಹೊತ್ತು ಹೋಗದು ನೀನು ಕೆಡಲೇನು ಫಲ ವಿಹುದು ತೆರಳಯ್ಯ ನಿನ್ನ ಗೃಹಕೇ ॥ ಮತ್ತಕಾಶಿನಿ ಇನಿತು ಪೇಳಿದುದ ಕೇಳ್ದಂನ | ರೋತ್ತಮನು ಮನ ಮರುಗುತಾ ಸುದತಿಯನು ತಾನು । ಯೆತ್ತಿ ತೊಡೆಯೋಳ್ಕುಳ್ಳಿರಿಸಿ ಪೇಳ್ದ ತನ್ನ ನಿಜ ಪರಿಯ ಮಾಜಿಸದೆ ನೃಪತೀ ॥ ೧ ॥

ರಾಗ–ಸುರುಟಿ–ಏಕತಾಳ

ಸುದತಿ ಶಿಖಾಮಣಿಯೇ । ಪೇಳುವೆ । ನಿದೊ ಮನ್ಮನ ಕಣಿಯೇ ॥ ಚದುರೆ ನೀನೆನಗಾ । ಗ್ರಥಿಕ ಭವಣೆ ಪಟ್ಟುದರಿಂ ದುಃಖಿಪೆ । ನಿದನೇನೆನಲೀ ॥ ॥ ೧ ॥ ವತ್ಸನೆನಲು ನಾನೇ । ಬೇಟೆಗೆ । ಉತ್ಸಹದೊಳು ಕಾಣೇ ॥ ಮತ್ತೀ ವಿಪಿನಕೆ । ಚಿತ್ತೈಸಿದೆ ಮೃ.। । ದೊತ್ತಿನೊಳೈ ತಂ | ದಿತ್ತೆನು ದರ್ಶನ ॥ ೨ ॥ ಮರುಳನು ಕಡು ಭಯಕೇ । ದುಃಖಿಸ ! ದಿರು ನಾನೀಕ್ಷಣಕೇ ॥ ತರಿದಟ್ಟುವೆನೆಮ । ಪುರಗವನನು ಚಂ । ದಿರ ಮುಖಿ ನಿನ್ನನು| ಕರೆದೊಯ್ಯುವೆನೂ ||೩||

ಭಾಮಿನಿ

ಕೇಳುತಾಯತ ನೇತ್ರೆ ವತ್ಸ ನೃ | ಪಾಲನನು ಬಿಗಿದಪ್ಪಿ ಸಂತಸ । ತಾಳಿದುದನೊರೆಯಲ್ಕೆ ಫಣಿಪನಿಗಸದಳವು ನೃಪತೀ || ಲೀಲೆ ಯಿಗೆ ಘಟಿಎರಡ ಕಳೆಯಲ್ । ಖೂಳನಿತ್ತಲು ನಡೆತರುತ ಗಡೆ । ಗಾಲ ಬಂದಿಹುದರಿಯದಾ ಗಂಧರ್ವನನು ನೋಡೀ ॥ ೧ ॥

ಕಂದಪದ್ಯ

ನಿರ್ಜರರಿದೆ ಕಂಪಿಸುವೋಲ್ | ಘರ್ಜಿಸಿ ವಿದ್ಯುಲ್ಲೋಚನನೊಳ ಪೊಗುತಾಗಂ ॥ ತರ್ಜಿಸಿ ಶರ ಬಿಡುತೆಂದನು । ಮರ್ಜನ ಕೇಳೀತಕೆ ಬಂದಿರುತಿಹೆ ಎನುತಂ ॥ ೧ ॥

ರಾಗ–ಸುರುಟಿ–ಮಟ್ಟೆತಾಳ

ಅರೆಲೊ ಹುಡುಗಾ । ನೇರಿಪೆ ಧಡಿಗಾ । ಚೋರರೆ ತೆರಮೋಗರ

ಮನೆ । ಸೂರೆಗೈಯ್ಯಲು ಬಂದಿಹು । ದ್ವಾರೆಲೋ ಹುಡುಗಾ ॥ ಪಲ್ಲ ॥ ಆಡುಂಬುವ ತರಳನೆ ಈ । ಕಾಡಿಗೆ ಬಂದ್ರ್ಯಾಕೇ ॥ ಮೋಡಿಯೊಳರಮನೆ ಹೊಕ್ಕಿಹೆ । ನೋಡಿಕೊ ತನುಜೋಕೇ ॥ ೧ ॥ ಉರವನು ಬಗೆಯುತ ನಿನ್ನನು । ತರಣಿಯ ಸುತನೆಡೆಗೇ ॥ ತೆರಳಿಸುವೆನು ಎನುತಲಿ ಪಲ್ । ಮೊರೆಯಲು ಸತಿ ನಡುಗೇ ॥ ೨ ॥ ಮುಚ್ಚಲೊ ಬ್ಯಾ ಖಳ ರಕ್ಕಸ । ತುಚ್ಛ ಯೊಳ್ ಫಲವೇನೂ ॥ ಕೊಚ್ಚುವೆ ನೋಡ್ ನಾಲಗೆಯನು । ಬಿಚ್ಚುವೆನೆದೆ ಯನ್ನೂ ॥ ೩ ॥ ಹಿಡಿದಪ್ಪಳಿಸುತ ನಿನ್ನನು । ಕಡಲಿಗೆ ಬಿಸುಟೇಗಾ ॥ ಹುಡುಗಿಯ ಕರೆದೊಯ್ಯುವೆ ತಾ । ನಡು ನಿಶಿಚರ ಬೇಗಾ ॥ ೪ ॥ ಭಳಿ ಭಳಿರೆನ್ನುತ ಕರ್ಬುರ । ಘಳಿಲನೆ ಮರ ಮುರಿದೂ ॥ ತಲೆಯೊಳು ಹೊಡೆ ಯಲ್ಕಂಡಾ । ಬಲವಂತನು ತರಿದೂ ॥ ೫ ॥ ಧರಣಿಪ ರೋಷವ ತಾಳುತ । ಶರವನು ಸುರರಿಪುಗೇ ॥ ಭರದಿಂದೆಸೆಯಲು ದಾನವ । ತೆರಳಿದನೆಮ ಪುರಿಗೇ ॥ ೬ ॥

ಭಾಮಿನಿ

ಸುದತಿಯನು ವಂಚಿಸುತ ತಂದಿರು । ವಧಮರೆಂತೀ ಧರೆಯೊಳಿ ಪ್ಪರು । ಕದನದೊಳು ಕಡೆ ಸೇರಿದರು ಬಳಿಕಿತ್ತ ತೋಷದಲೀ ॥ ಪದುಮ ನೇತ್ರೆಯು ವಿನಯದಿಂ ನರ । ರಧಿಪ ಕರಕೊಳುತಾಗ ತನ್ನಯ । ಕುದುರೆಯ ಯನು ಸತಿಯೊಡನೆ ಏರುತ ಬಲದೆಡೆಗೆ ಬಂದೂ ॥ ೧ ॥

ಕಂದಪದ್ಯ

ಮನ್ನಿಸಿ ಶಬರರ ನೀವ್ ಪ್ರೋ । ಗೆನ್ನುತ ಕಳುಹಿಸಿ ತನ್ನಯ ಮಾರ್ಬಲ ದೊಡನಂ ॥ ಸನ್ನುತ ದೃಢವರ್ಮನ ಬಳಿ ಗನ್ನೀರ್ವರು ಪೊರಟ್ಟೈ ತಂದರು ಬಲು ಜವದಿಂದಂ ॥ ೧ ॥

ರಾಗ–ಭೈರವಿ–ಝಂಪೆತಾಳ

ಚಿತ್ತವಿಸು ಶ್ರೀಹರ್ಷ । ನಿತ್ತ ವತ್ಸಾಕ್ಷಿ ಜನ । ಪೋತ್ತಮನು ನಡೆ ತರಲಿ । ನ್ನತ್ತ ದೃಢವರ್ಮಾ ॥ ೧ ॥ ಸಿದ್ಧಿಯನು ತಿಳಿದು ತಾನೆದ್ದು ನೋಡುತ ತನ್ನ । ಮುದ್ದು । ಮಗಳನು ಪ್ರೀತಿ । ಕದ್ದೊಯ್ದನೆನುತಾ ॥ ೨ ॥

ಕಂಗೆಟ್ಟು ಬಳಲಿಸಲ । ವಂಗ ಚಿಂತಿಸುತ ಸುತೆ । ಯಂಗವೆನು ನೆನೆ ನೆನೆಯು । ತುಂಗ ಜನಪಾಲಾ ॥ ೩ ॥ ಇರಲಿತ್ತಾ ಕ್ಷಣ ಬಂದೂ । ಚರರೂ ಪೇಳ್ದರು ನಮ್ಮಾ । ಪೊರ ಬಾಗಿಲೊಳಗೋರ್ವ । ತರಳೆಯನು ಕೂಡೀ ॥ ॥ ೪ ॥ ಬಂದಿರುವನೆನಲು ನೃಪ । ನೆಂದನವರಿಗೆ ಸಭೆಯ । ಹೊಂದಬಿಡ ಬಹುದೆನಲಾ । ನಂದದಿಂ ಚರರೂ ॥ ೫ ॥ ಪೇಳಿದರು ಒಳಗೆ ಪೋ । ಗೈಳೆಂದುದನು ತಿಳಿದು । ನೀಲಕುಂತಳೆ ಸಹಿತ । ಲೋಲ ವತ್ಸಾಖ್ಯಾ ॥ ೬ ॥

ವಾರ್ಧಿಕ್ಯ

ನಡೆ ತಂದು ಭೂಮಿಪಗೆ ವಂದಿಸಲು ತಿಳಿದಾಗ ' ದೃಢವರ್ಮ ತೋಷಾಬ್ಧಿಯೊಳಗಾಡೆ ಪರಿವಾರ । ಜಡಜ ಮುಖಿ ಸೌರಂಭೆ ಸಹಿತಲಾ ನಂದವನು ಪಡೆದುದನು ಪೇಳಲೆಂತೂ ॥ ಒಡನೆ ವತ್ಸನ ಮನ್ನಿಸುತ ಕುವರಿಯನು ಕೇಳು । ತಡೆಸೀರ್ದ ಕಷ್ಟಕತಿ ದಃಖಿಸಲು ನರಪತಿಯು । ನುಡಿವಳಾ ಸುದತಿ ಚಿಂತಿಪುದೇಕೆ ವಿಧಿ ಲಿಪಿಯ ಮೀರಲಾರಳವು ಜಗದೀ ॥೧॥

ರಾಗ–ಮುಖಾರಿ-ಝಂಪೆತಾಳ

ವ್ಯರ್ಥ ಚಿಂತಿಪುದೇಕೆ । ಮನದಿ ಜನಪಾ । ಕರ್ತನಪ್ಪಣೆಯಂತೆ । ವರ್ತಿಸಿದೆ ನಾನಿದಕೆ ॥ ವ್ಯರ್ಥ ॥ ಪಲ್ಲ ॥ ಲೋಕೇಶನಪ್ಪಣೆಯ । ಲೋಕದೊಳು ಮೀರ್ವರ್‍ಯಾ । ರ್‍ಯಾಕಿನಿತು ಯೋಚಿಸುವೆ । ಯೇ ಕೃಪಾಳೂ ॥ ಸಾಕಿ ಸಲಹಿದೆನೆನುತ । ಶೋಕಿಸುತಲಿರಲು ವಿಧಿ । ತಾ ಕರುಣದೋರು ವುದೆ । ಘಾಕದಲ್ಲೈ ॥ ವ್ಯರ್ಥ ॥ ೧ ॥ ಸೀತೆಯೆಂದೆನೆ ತ್ರಿಜಗ । ಮಾತೆಯೆ ನಿಸಿಹಳವಳ । ಯಾತು ದಾನಪನೈದ । ರೀತಿಗೆಟ್ಟೊ । ನೀತಿಯುತೆ ದ್ರೌಪದಿಯು । ಧೂರ್ತ ದುಶ್ಯಾಸನಿಂ । ದೇತರದಿ ಬಳಲಿದಳು । ಮಾತಿದೇಕೆ ॥ ॥ ೨ ॥ ಸತಿಸುತೆಯರೆಂದೆಂಬು । ವತಿಶಯದ ಭವ ಪಾಶ । ಕತಿ ಚಿಂತೆ ಪಡುವವನು । ಮತಿಹೀನನೂ ॥ ಶತಯಾಗ ಮುಖ್ಯ ಸುರ । ವಿತತಿಗಿ ಹುದೀ ಕಷ್ಟ । ಪಿತನೆ ಮರುಗುವುದೇನು । ಹಿತವೆ ಪೇಳೂ ॥ ೩ ॥

ಭಾಮಿನಿ

ಮಗಳ ಮಾತಿಗೆ ಮೆಚ್ಚಿ ಜನಪತಿ । ಮಿಗಿಲು ತೋಷವ ತಾಳಿ

ವೆ ಋದ್ಧಿಸಿ | ಭಗಣಪತಿ ಮುಖಿಗಾಗ ಲಗ್ನಕೆ ದಿವವ ನಿಶ್ಚೈಸೀ || ಜಗದ ರಾಯರನೆಲ್ಲ ಬರೆಸುತ | ಲಗಣಿತದ ಭೂ ದಿವಿಜರಿಂದಲಿ | ನಗಹರಾದಿ ದಿನೌಕಸರು ಮನ ಮೆಚ್ಚು ವೋಲೆಸಗೀ || ೧ ||

ಕಂದಪದ್ಯ

ಮದುವೆಯ ಸಮಯದಿ ದ್ವಿಜರಿಗೆ| ಮುದದೊಳು ದಕ್ಷಿಣೆಯಿತ್ತಾ ಜನಪತಿ ಬಳಿಕಾ || ವಧುವರರಿಗೆ ಬಳುವಳಿಯ | ನ್ನಧಿಕ ತೇದೊಳೀವುತ ಕಳುಹಿದ ಪುರವರಕಂ || ೧ ||

ಶರಷಟ್ಪದಿ

ಬಳಿಕಾ ವತ್ಸನು ನಳಿನಾಕ್ಷಿಯನೊಡ | ಗೊಳುತಲಿ ಪಟ್ಟಣಕ್ಕೈ ತಂದೂ || ಇಳೆಯನು ಪಾಲಿಸಿ ಕಳೆದನು ಕಾಲವ | ಜಲಜಾಕ್ಷನ ಕರುಣದೊಳಂದೂ || ೧ ||

ರಾಗ–ಸೌರಾಷ್ಟ್ರ–ತ್ರಿವುಡೆ

ಕೇಳಿದ್ಯೆ ಶ್ರೀಹರ್ಷರಾಯನೆ | ಬಾಲೆಯೋರ್ವಳಿಗಾಗಿ ಭೂಪರು | ಕಾಳಗದಿ ಕಾದಾಡಿದುದ ನೀ ! ಲೀಲೆಯಿಂದಾ || ೧ || ವನಜ ಮುಖಿಯನು ವತ್ಸ ಲಗ್ನವ | ನೆನಿತೆಸಗಿಕೊಂಡೆಂಬ ಪರಿಯದು | ಮನಕೆ ಬಂತೇ ನೆನುತ ಕೇಳಲು ಜನಪ ನುಡಿದಾ || ೨ || ಕರುಣ ವಾರಿಧಿ ನಿಮ್ಮ ದಯದೊಳ | ಗರಿತೆನೆನ್ನುಳ ಪದಕೆರಗಿ ಭೂ | ವರನು ತೋಷದೊಳಿರ್ದನೆಂಬುವ | ಚರಿತೆಯಿದನೂ || ೩ || ಪಡುಗಡಲಿನ ದಡದಿ ರಂಜಿಪ | ಉಡುಪಿ ಕ್ಷೇತ್ರದಿ ನಿಂದು ಭಕುತರ | ಗಡಣ ಪಾಲಿಪ ಹರಿಯ ಕರುಣದೊ | ಳೊಡನೆ ಇದನೂ || ೪ || ವಿದುಧರನ ಸದ್ಭಕ್ತ ವಿದ್ಯಾ | ಸಿಧಿಗಳೆನಿಸುವ ಸುಬ್ಬರಾಯರ | ಪದ ಸಹಾಯದಿ ಬರೆದೆ ಗುರುವೆಂ | ಬುದನು ಬಗೆದೂ || ೫ || ಕುಂದು ಕೊರತೆಗಳಿದರ ಕವಿತಾ | ಬಂಧ ಛಂದಸ್ಸಿನೊಳಗಿರ್ದುದ | ಚಂದದಿಂ ಸಮುಗ್ಯೆಸಿರುವೆ ನವ | ದಿಂದಲಿದನೂ || ೬ || ಕರುಣದೊಳು ವಾಚಿಸುತ ದೋಷವ | ನಿರದೆ ತಿದ್ದಲು ಖ್ಯಾತಿ ಬರುವುದು | ನರಹರಿಯು ಪೊರೆಯುವನು ಸರ್ವರ | ನಿರತ ದಯದೀ || ೭ ||

॥ ಮಂಗಳ ಪದ ॥

॥ ರಾಗ-ಆಹೇರಿ-ಝಂಪೆತಾಳ ॥

ಶ್ರೀಕೃಷ್ಣನಿಗೆ ಕಮಲನಾಭನಿಗೆ । ಗಿರಿಧರ್ಗೇ । ಲೋಕಪಾಲಕ ದೇವಕಿ ಕಂದಗೇ ॥ ಪಾಕಶಾಸನ ಮುಖ್ಯ । ದಿವಿಜಗಣ ರಕ್ಷಕಗೆ । ಕಾಕುಸ್ಥನಿಗೆ ವಿಮಲ । ವನಮಾಲಗೇ ॥ ಜಯಮಂಗಲಂ ॥ ೧ ॥ ಮಾರ ಪಿತನಿಗೆ ಲಕ್ಷ್ಮೀ । ನಾರಾಯಣಗೆ ಯೋಗಿ । ವಾರ ವಂದಿತ ಸದಾ । ನಂದ ಮಯಗೇ ॥ ಶ್ರೀರಮಾಧವ ಕರುಣ । ವಾರಿನಿಧಿ ಭಕ್ತಜನ । ವಾರಿರುಹ ತರಣಿ ಭವ । ದೂರ ಹರಿಗೇ ॥ ಮಂಗಲಂ ॥ ೨ ॥ ನಗಧರನಿಗಘಹರಗೆ । ಖಗರಾಜ ರೂಢನಿಗೆ । ಭೃಗುಜಗರ್ವಾಪ ಹಾರಗೆ । ಗೋಪಗೆ ॥ ಮಗುವ ನುದ್ಧರಿಸಿ ಮೂ । ಜಗವ ಸಲಹಿದ ಉಡುಪಿ । ಯಗಣಿತಾನಂದ ಶ್ರೀ । ಕೃಷ್ಣದೊರೆಗೇ ॥ ಜಯ ಮಂಗಲಂ । ನಿತ್ಯ ಶುಭ ಮಂಗಲಂ ॥ ೩ ॥ ॥ ಶ್ರೀ ॥

--------ಸಂಪೂರ್ಣ.--------

ಈಗಾಗಲೇ **48** ಹೊಸ ಪ್ರಸಂಗ ರಚಿಸಿ ಯಕ್ಷಗಾನ
ಇತಿಹಾಸದಲ್ಲಿಯೇ ಮಹೋನ್ನತ ದಾಖಲೆ ನಿರ್ಮಿಸಿದ
ಶ್ರೀ ಸೀತಾನದಿ ಗಣಪಯ್ಯ ಶೆಟ್ಟರಿಂದ ಬರೆಯಲ್ಪಟ್ಟ
ಸರಳವಾದ ಅರ್ಥಸಹಿತ

ಯಕ್ಷಗಾನ

ಶ್ರೀ ಕೃಷ್ಣ ಸಂಧಾನ
ಸುಧನ್ವ ಕಾಳಗ
ರಾಜಸೂಯ (ಮಾಗಧ ವಧೆ)
ದಕ್ಷಾಧ್ವರ–ಗಿರಿಜಾ ಕಲ್ಯಾಣ
ವಿಭೀಷಣ ನೀತಿ
ರಾಷ್ಟ್ರ ವಿಜಯ

ಯಕ್ಷಗಾನ

ವೀರ ವಜ್ರಾಂಗ
ಚ್ಯವನೋಪಾಖ್ಯಾನ
ಶನೀಶ್ವರ ಮಹಾತ್ಮೆ

ರುಕ್ಮಾಂಗದ ಚರಿತ್ರೆ
ಹಿರಿಯಡ್ಕ ಕ್ಷೇತ್ರ ಮಹಾತ್ಮೆ
ತುಳುನಾಡ ಸಿರಿದೇವಿ
ಬಪ್ಪನಾಡು ಕ್ಷೇತ್ರ ಮಹಾತ್ಮೆ

ನಾಟಕ: ಸತೀ ಸಾವಿತ್ರಿ

ಕಾವ್ಯ: ವಾಲಿ ಸಂಹಾರಂ

ಭಜನೆಗಳು

ಹರಿ ಭಜನಾಮೃತ
ದೇವಿ ಭಜನಾಮೃತ
ಮೊದಲಾದ ಪುಸ್ತಕಗಳಿವೆ.

ಗಣೇಶ ಭಜನೆ
ತುಳು ಭಜನಾವಳಿ
ವ್ಯಾಪಾರಿಗಳಿಗೆ ಧಾರಾಳ ಕಮಿಶನ್

ಸುಬೋಧ ಸಾಹಿತ್ಯ ಭಂಡಾರ
ಹಿರಿಯಡಕ, ದ. ಕ.